ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ರಾಜೀವ ಗಾಂಧೀಯುವರ ಎರಡು ಭಾಷಣಗಳು

ರಾಜೀವರಿಗೆ ನ್ಯಾಯ ದೊರೆಯಬೇಕಿತ್ತು

ಭಾರತೀಯ ರಾಜಕೀಯ ನಕ್ಷೆ : ನಕ್ಷತ್ರಗಳಿಲ್ಲದ ಆಗಸ

ಸಂಪುಟ : ೧೧ ಜೂನ್ ೧೯೯೧ ಸಂಚಿಕೆ : ೧

ಈ ಸಂಚಿಕೆಯಲ್ಲಿ

ನಿಮ್ಮೊಂದಿಗೆ......

ಹತ್ತನೇ ಲೋಕಸಭಾ ಚುನಾವಣೆ – ಜನತೆಯ ಅನಿಸಿಕೆ – ರಾಜಕಾರಣದಲ್ಲಿ ಹೆಚ್ಚುತ್ತಿರುವ ಹಿಂಸೆ – ೧೯೯೧ ಅನೇಕ ಮಹನೀಯರ ಶತಮಾನೋತ್ಸವ ವರ್ಷ ಇತ್ಯಾದಿಗಳನ್ನು ಕುರಿತು ನಿಮ್ಮೊಂದಿಗೆ ವಿಚಾರ ಹಂಚಿಕೊಳ್ಳಲಾಗಿದೆ,

ಕರ್ನಾಟಕದ ವೈಭವಪೂರ್ಣ ಪರಂಪರೆ ೩

ರಾಜೀವ ಗಾಂಧೀಯವರು ಮೈಸೂರಿನಲ್ಲಿ ವಿಶ್ವಕನ್ನಡ ಸಮ್ಮೇಳನ ಉದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಕರ್ನಾಟಕದ ವೈಭವಯುತ ಪರಂಪರೆಯನ್ನು ವರ್ಣಿಸುತ್ತ ದೇಶದ ವಿವಿಧತೆಯಲ್ಲಿ ಐಕ್ಯತೆಯ ಕಡೆಗೆ ನಿರ್ದೇಶನ ಮಾಡಿದ್ದಾರೆ.

ಐಕ್ಯಮತ್ಯ ರಕ್ಷಿಸಿ, ಭಯೋತ್ಪಾದನೆ ನಿರ್ನಾಮ ಮಾಡಿ ೮

ಭಯೋತ್ಪಾದಕರ ಗುಂಡಿಗೆ ಬಲಿಯಾದ **ರಾಜೀವ ಗಾಂಧೀ** ಭಯೋತ್ಪಾದಕರು ಹಾಗೂ ಭಯೋತ್ಪಾದನೆಯ ನಿರ್ಮೂಲಕ್ಕೆ ಕಂಕಣಬದ್ಧರಾಗಿರೆಂಬುದನ್ನು ಅವರ ಈ ಭಾಷಣ ಸಾಕ್ಷಿ.

ಭಾರತದ ರಾಜಕೀಯದಲ್ಲಿ ಸಭ್ಯರಿಗೆ ಸ್ಥಾನವಿಲ್ಲವೆ? ರಾಜಕಾರಣವೆಂಬುದು ಕೊಚ್ಚೆಯೆ? ರಾಜೀವರಿಗೆ ನಾವು "ಸ್ವಚ್ಛ ಭಾರತದ" ಘೋಷಣೆ ಸಾಕಾರಗೊಳಿಸಲು ಅವಕಾಶ ಕೊಟ್ಟೆವೆ? ದುರಂತದಲ್ಲಿ ಮುಳುಗಿದ ರಾಜೀವರ ಸುತ್ತಲಿನ ರಾಜಕಾರಣದ ಮೇಲೆ ಬೆಳಕು ಚೆಲ್ಲಿದ್ದಾರೆ **ಎ. ಎನ್. ಧಾರ್** ತಮ್ಮ "ರಾಜೀವರಿಗೆ ನ್ಯಾಯ ದೊರಕಬೇಕಿತ್ತು" ಲೇಖನದಲ್ಲಿ. ೧೩

ಭಾರತೀಯ ರಾಜಕೀಯ ನಕ್ಷೆ : ನಕ್ಷತ್ರಗಳಿಲ್ಲದ ಆಗಸ ೧೬

ಎಲ್. ಸಿ. ಜೈನ್ ಸುಪ್ರಸಿದ್ಧ ಚಿಂತಕ – ಲೇಖಕರು. ಸ್ವಾತಂತ್ರ್ಯ ಬರುವ ಮೊದಲು ದೇಶಾಭಿಮಾನಿ ತ್ಯಾಗಿಗಳಿಂದ ತುಂಬಿದ್ದ ಭಾರತ ಈಗ ಹೇಗೆ ಬರಿದಾಗಿದೆ ಎಂಬುದನ್ನು ವಿವರಣಾತ್ಮಕವಾಗಿ ಈ ಲೇಖನದಲ್ಲಿ ತಿಳಿಸಿದ್ದಾರೆ.

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧; ಮೇಲುಕೋಟೆ. ಜೂನ್ ೧೫, ೧೯೯೧; ಸಂಚಿಕೆ ೧೨

ನಿಮ್ಮೊಂದಿಗೆ........

ಹತ್ತನೇ ಲೋಕಸಭೆಗಾಗಿ ಮಹಾಚುನಾವಣೆ ಈಗ ತಾನೆ ಮುಗಿದಿದೆ. ಫಲಿತಾಂಶಕ್ಕಾಗಿ ಎಲ್ಲೆಲ್ಲೂ ಕುತೂಹಲ ಮೂಡಿದೆ. ಸಾಮಾನ್ಯವಾಗಿ ಎಲ್ಲ ಮತದಾರರ ಅನಿಸಿಕೆ ಏನೆಂದರೆ ಯಾವ ಪಕ್ಷಕ್ಕೂ ಬಹುಮತ ಸಿಗಲಾರದು, ರಾಷ್ಟ್ರೀಯ ಸರಕಾರದ ರಚನೆ ಅನಿವಾರ್ಯ. ಆದರೆ ರಾಜಕೀಯ ಪಕ್ಷಗಳು – ಪ್ರಮುಖವಾಗಿ ಬಿ. ಜೆ. ಪಿ. ಮತ್ತು ಕಾಂಗ್ರೆಸ್ – ತಮಗೇ ಬಹುಮತ ದೊರೆಯುತ್ತವೆಂಬ ವಿಶ್ವಾಸವನ್ನು ಹೊಂದಿವೆ. ರಾಷ್ಟ್ರೀಯ ರಂಗ ಯಾವ ಭರವಸೆಯನ್ನೂ ಮೂಡಿಸಲು ಅಸಮರ್ಥವಾಗಿದೆ. ರಾಜೀವ ಗಾಂಧೀಯವರ ಹತ್ಯ ಇಡೀ ಚುನಾವಣೆಯ ಮೂಲ ಅರ್ಥಕ್ಕೇ ಹೊಡೆತ ಕೊಟ್ಟಿತು. ಇನ್ನೂ ಅನೇಕ ರಾಜಕೀಯ ಕೊಲೆಗಳಾದವು; ಸಾವಿರಾರು ಮತಗಟ್ಟೆಗಳಲ್ಲಿ ಮರುಚುನಾವಣೆ ನಡೆಯಬೇಕಾಯಿತು. ಇದೆಲ್ಲವೂ ಪ್ರಜಾತಾಂತ್ರಿಕ ವ್ಯವಸ್ಥೆಗೇ ಅವಮಾನವಾದಂತಾಯಿತು. ನಲ್ವತ್ತು ವರ್ಷಗಳ ಪ್ರಜಾಪ್ರಭುತ್ವದ ಪ್ರಗತಿ ಚಕ್ರ ಪುನಃ ನಲ್ವತ್ತು ವರ್ಷಗಳಷ್ಟು ಹಿಂದಕ್ಕೆ ತಿರುಗಿತು.

ಇಂಥ ಅಪ್ರಜಾತಾಂತ್ರಿಕ ಬೆಳವಣಿಗೆಗೆ ಯಾರು ಹೊಣೆ? ಕಳೆದ ನಾಲ್ಕು ದಶಕಗಳಿಂದ ಪ್ರಜಾಪ್ರಭುತ್ವದ ಚಟುವಟಿಕೆಗಳಲ್ಲಿ ಭಾಗವಹಿಸಿದ ಮತದಾರರು ಹೊಣೆಯೆ ಅಥವಾ ರಾಜಕೀಯ ಪಕ್ಷಗಳೆ? ರಾಜಕೀಯ ಕ್ಷೇತ್ರದಲ್ಲಿ ಇಂದು ತಾಂಡವವಾಡುತ್ತಿರುವ ಭ್ರಷ್ಟಾಚಾರ ಮತ್ತು ಹಿಂಸೆಗೂ ಕೂಡ ಯಾರು ಹೊಣೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಅನಿವಾರ್ಯವಾಗಿದೆ ಎಂಬುದನ್ನು ಈ ಹತ್ತನೇ ಲೋಕಸಭಾ ಚುನಾವಣೆ ಸ್ಪಷ್ಟವಾಗಿ ತೋರಿಸಿದೆ. ಸಾಮಾನ್ಯವಾಗಿ ಇಂದಿನ ಅಧೋಗತಿಯ ಪರಿಸ್ಥಿತಿಗೆ ರಾಜಕೀಯ ಪಕ್ಷಗಳು ಕಾರಣವೆಂದು ಹೇಳಲಾಗುತ್ತದೆ. ಮೇಲುತೋರಿಕೆಯಲ್ಲಿ ಇದು ಸರಿ ಎಂದೆನಿಸಿದರೂ ಇದರ ಸಂಪೂರ್ಣ ಹೊಣೆ ಕೇವಲ ರಾಜಕೀಯ ಪಕ್ಷಗಳ ಮೇಲೆ ಹಾಕಿದರೆ ತಪ್ಪಾಗುವುದೆಂದು ಅನಿಸುತ್ತದೆ. ಏಕೆಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮತದಾರನೇ ಮೂಲವಸ್ತು. ಅವನ ಚರ್ಯೆ ಯಾವ ರೀತಿಯೋ ಅದೇ ರೀತಿ ಅವನು ಸೃಷ್ಟಿಸುವ, ಬೆಂಬಲಿಸುವ ಪಕ್ಷಗಳದ್ದಾಗಿರುತ್ತದೆ. ಅವನು

ತನ್ನ ಜೀವನದಲ್ಲಿ ಹಿಂಸೆಯನ್ನು ವರ್ಜಿಸಿದರೆ, ಭ್ರಷ್ಟತೆಯನ್ನು ವರ್ಜಿಸಿದರೆ ರಾಜಕೀಯ ಕ್ಷೇತ್ರವು ಕೂಡ ಹಿಂಸೆ ಮತ್ತು ಭ್ರಷ್ಟತೆಯಿಂದ ದೂರುವಿರುತ್ತದೆ. ರಾಜೀವರ ಹತ್ಯೆಯಾದಾಗ, ಅದಕ್ಕೂ ಮೊದಲು ಇಂದಿರಾ ಗಾಂಧೀ ಮತ್ತು ಅದಕ್ಕೂ ಮೊದಲು ಮಹಾತ್ಮಾ ಗಾಂಧೀಯವರ ಹತ್ಯೆಯಾದಾಗ, ದೇಶದ ಜನತೆ ಶೋಕ ಸಭೆಗಳನ್ನು ನಡೆಸಿಕೊಂಡು ಬಂದಿತೆ ಹೊರತು ಈ ಹಿಂಸೆಯ ಮೂಲ ಎಲ್ಲಿದೆ, ಅದರ ನಿವಾರಣೆಗೆ ಏನು ಕ್ರಮ ಎಂಬ ಬಗ್ಗೆ ಇದುವರೆಗೂ ಗಂಭೀರವಾಗಿ ಚಿಂತನೆ ನಡೆದಿಲ್ಲ. ಹಿಂಸೆ ಒಂದು ಅನಿವಾರ್ಯ ಸಂಗತಿ ಎಂದೇ ಭಾವಿಸುವವ್ಟರ ಮಟ್ಟಿಗೆ ಅದು ಸಹಜವಾಗಿದೆ. ಇದೇ ರೀತಿಯ ಮನೋಭಾವ ಉಳಿದುಕೊಂಡು ಬಂದರೆ ಹಿಂಸೆಯದೇ ಮೇಲುಗೈಯಾಗಿ ಪ್ರಜಾಪ್ರಭುತ್ವದ ಬೆಳವಣಿಗೆ ಕುಂಠಿತಗೊಳ್ಳುವುದು. ಆದ್ದರಿಂದ ಮತದಾರ ತನ್ನ ಜೀವನದ ಎಲ್ಲ ಚಟುವಟಿಕೆಗಳಲ್ಲಿಯ ಹಿಂಸೆ ಮತ್ತು ಹಿಂಸೆಗೆ ಕಾರಣವಾಗುವ ಸನ್ನಿವೇಶಗಳನ್ನು ತೆಗೆದು ಹಾಕುವ ಪ್ರಯತ್ನ ಮಾಡಬೇಕು. ಇದೇ ವಿಚಾರವನ್ನು ಮುಂದಕ್ಕೆ ಎಳೆದಾಗ ನಾವು ಶೋಷಣೆ ಮುಕ್ತ ಆರ್ಥಿಕ ನೀತಿಯ ಹತ್ತಿರ ಬರುತ್ತೇವೆ; ರಾಜಕೀಯ ಆರ್ಥಿಕ ವಿಕೇಂದ್ರಿಕರಣದ ಹತ್ತಿರ ಬರುತ್ತೇವೆ. ಈಗಿನ ಹತ್ತನೇ ಲೋಕಸಭಾ ಚುನಾವಣೆಯಿಂದ ಈ ನಿಟ್ಟಿನಲ್ಲಿ ಮತದಾರರು ಯೋಚನೆ ಮಾಡುವಂತೆ ಪ್ರೇರಣೆ ಸಿಗುವುದಾದರೆ ನಮ್ಮ ದೇಶದ ಪ್ರಜಾಪ್ರಭುತ್ವದ ಕ್ಷಿತಿಜದಲ್ಲಿ ಹೊಸ ಅರುಣೋದಯ ಗೋಚರಿಸೀತು.

ಇದೇ ಸಂಚಿಕೆಯಲ್ಲಿ ರಾಜೀವ ಗಾಂಧೀಯವರ ಎರಡು ಭಾಷಣಗಳನ್ನು ಪ್ರಕಟಿಸಲಾಗಿದೆ. ಒಂದು ಅವರು ಮೈಸೂರಿನಲ್ಲಿ 'ವಿಶ್ವಕನ್ನಡ ಸಮ್ಮೇಳನ' ವನ್ನು ಉದ್ದೇಶಿಸಿ ಮಾಡಿದ ಉದ್ಘಾಟನಾ ಭಾಷಣ. ಇದು ಅವರ ಕರ್ನಾಟಕದ ಬಗೆಗಿನ, ಕನ್ನಡ ಜನತೆಯ ಬಗೆಗಿನ ಗೌರವಾದರಗಳನ್ನು ತೋರಿಸುತ್ತದೆ. ಅದೊಂದು ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ದಾಖಲೆ. ಇನ್ನೊಂದು ಭಾಷಣ ಸ್ವಾತಂತ್ರ್ಯ ದಿನಾಚರಣೆಯಂದು ದಿಲ್ಲಿಯ ಕೆಂಪುಕೋಟೆಯಿಂದ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣ. ಆ ಭಾಷಣದಲ್ಲಿ ಪ್ರಮುಖವಾಗಿ ವ್ಯಕ್ತವಾಗಿರುವ ಮಾತುಗಳು ಭಯೋತ್ಪಾದನೆ ಹಾಗೂ ಭಯೋತ್ಪಾದಕರ ನಿರ್ಮೂಲನಕ್ಕೆ ಸಂಬಂಧಿಸಿದವು. ಆದರೆ ಕೊನೆಗೆ ಆ ಉದ್ದೇಶ್ಯ ನೆರವೇರುವ ಮೊದಲೇ ಸ್ವತಃ ರಾಜೀವ್ ಅದಕ್ಕೆ ಬಲಿಯಾದುದು ಎಲ್ಲರ ಹೃದಯವನ್ನು ಚುಚ್ಚುವ ಸಂಗತಿ.

೧೯೯೧ ಅನೇಕ ಮಹನಿಯರ ಶತಮಾನೋತ್ಸವದ ವರ್ಷ. ರಚನಾತ್ಮಕ ಹಾಗೂ ಸರ್ವೋದಯ ವಿಚಾರಕ್ಕೆ ಸಂಬಂಧಿಸಿದಂತೆ ನಮಗೆ ತಿಳಿದಹಾಗೆ ಮಹಾತ್ಮ ಗಾಂಧೀಯವರ ಆಪ್ತಕಾರ್ಯದರ್ಶಿ ಮಹಾದೇವ ದೇಸಾಯಿ, ಗಾಂಧೀ ಅರ್ಥ

೭ ನೇ ಪುಟ ನೋಡಿ

ಕರ್ನಾಟಕದ ವೈಭವಪೂರ್ಣ ಪರಂಪರೆ

ರಾಜೀವ ಗಾಂಧೀ

ಕರ್ನಾಟಕವು ವೈಭವಪೂರ್ಣ ಪರಂಪರೆಯುಳ್ಳ ಸುಂದರ ನಾಡು. ನೀವು ಈಗತಾನೇ ನಿಮ್ಮ ಪರಂಪರೆಯನ್ನು ಸ್ವಲ್ಪ ಮಟ್ಟಿಗೆ ಪ್ರಸ್ತಾಪಿಸಿದಿರಿ. ಇದು ಬಹು ಪುರಾತನವಾದುದು. ಬಹಶಃ ನಿಮ್ಮ ನಾಡಿನ ಸೌಂದರ್ಯ ಮತ್ತು ವೈವಿಧ್ಯತೆ, ನಿಮ್ಮ ಸುಂದರ ಮಂಗಳೂರು ಕರಾವಳಿ, ಕೊಡಗಿನ ಗಿರಿಗಳು, ಉತ್ತರದ ಗಂಡು ನೆಲ, ನಿಮ್ಮ ಅರಣ್ಯಗಳು, ನಿಮ್ಮ ಜಲಪಾತಗಳು, ನಿಮ್ಮ ನದಿಗಳು, ಭೋರ್ಗರೆಯುವ ಕಾವೇರಿ – ನೀವು ಬೆಳೆಸಿದ ಈ ಪರಂಪರೆಗೆ ಮತ್ತು ನಿಮ್ಮ ಶ್ರೀಮಂತ ಸಂಸ್ಕೃತಿಗೆ ಸ್ಫೂರ್ತಿದಾಯಕವಾಗಿವೆ ಎನಿಸುತ್ತದೆ. ಕರ್ನಾಟಕವು ನಮಗೆ ಕೋಲಾರದಿಂದ ಬಂಗಾರ, ಬೆಂಗಳೂರಿನಿಂದ ರೇಷ್ಮೆ, ಚಿಕ್ಕಮಗಳೂರಿನಿಂದ ಕಾಫಿ ಹಾಗೂ ಮೈಸೂರಿನಿಂದ ಶ್ರೀಗಂಧವನ್ನು ನೀಡುತ್ತದೆ. ಕನ್ನಡ ತಾಯಿಗೆ ನಮಸ್ಕಾರ.

ದುರದೃಷ್ಟವಶಾತ್ ನನ್ನ ಕನ್ನಡ ಭಾಷಾ ಜ್ಞಾನವು ಅತ್ಯಲ್ಪ. ಕರ್ನಾಟಕದ ಭವ್ಯ ಪರಂಪರೆಗೆ ಹಲವಾರು ಪ್ರಖ್ಯಾತ ವ್ಯಕ್ತಿಗಳ ಸಂಬಂಧವಿದೆ. ಕರ್ನಾಟಕದ ಹಾಗೂ ಕರ್ನಾಟಕದ ಜನತೆಯ ಬಗ್ಗೆ ಶ್ರೀಮತಿ ಇಂದಿರಾ ಗಾಂಧಿಯವರು ಸೌಹಾರ್ದಭಾವನೆ ಹೊಂದಿದ್ದುದು ಅತ್ಯಂತ ಸಹಜವಾಗಿತ್ತು. ಅವರು ಬಹು ಕಷ್ಟ ಪರಿಸ್ಥಿತಿಯಲ್ಲಿದ್ದಾಗ ಕಾಂಗ್ರೆಸ್ಸನ್ನು ಪುನಃ ಅಧಿಕಾರಕ್ಕೆ ತರಲು ಕರ್ನಾಟಕದತ್ತ ದೃಷ್ಟಿ ಹರಿಸಿದ್ದು ಸೂಕ್ತವಾಗಿಯೇ ಇತ್ತು. ಅವರು ಆರಿಸಿಕೊಂಡ ಸ್ಥಳ ಚಿಕ್ಕಮಗಳ ಊರೆಂದು ಅನ್ವರ್ಥನಾಮ ಪಡೆದ ಚಿಕ್ಕಮಗಳೂರು.

ಕರ್ನಾಟಕವು ಶತಶತಮಾನಗಳಿಂದ ಭಾರತೀಯ ನಾಗರೀಕತೆಯ ತವರಾಗಿದೆ. ಈ ಭೂಮಿಯಲ್ಲಿ ಮಹಾನ್ ಸಾಮ್ರಾಜ್ಯಗಳು ಬೆಳಗಿದವು – ಶಾತವಾಹನರು, ಗಂಗರು, ಕದಂಬರು, ನಂತರದ ವರ್ಷಗಳಲ್ಲಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ರಾಯರು, ಮತ್ತು ಅನಂತರ, ಗುಲ್ಬರ್ಗದಲ್ಲಿ ಬಹಮನೀಯರು, ಬಿಜಾಪುರದಲ್ಲಿ ಆದಿಲಷಾಹಿಗಳು, ಇಲ್ಲಿ ಮೈಸೂರಿನ ಒಡೆಯರು ಮತ್ತು ಬ್ರಿಟಿಷ್ ಕಾಲಕ್ಕೆ ಬಂದಂತೆ ಬ್ರಿಟಿಷರೊಂದಿಗೆ ಹೋರಾಡಿದ ಹೈದರಾಲಿ ಮತ್ತು ಟಿಪ್ಪೂಸುಲ್ತಾನರು. ನಮ್ಮ ಸ್ವಾತಂತ್ರ್ಯಕ್ಕಾಗಿ ದಿಟ್ಟತನದಿಂದ ಹೋರಾಡಿದ ಕಿತ್ತೂರು ಚೆನ್ನಮ್ಮನನ್ನು ನಾವು ಮರೆಯುವಂತಿಲ್ಲ.

ಟಿಪ್ಪೂಸುಲ್ತಾನರ ಅಮೂಲ್ಯ ಸ್ವರ್ಣ ಖಚಿತ ಖಡ್ಗ ದೊರೆತುದನ್ನು ಇಂದಿನ ಪತ್ರಿಕೆಗಳಲ್ಲಿ ನಾನು ಓದಿದೆ. ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಅದು ಲಭಿಸಿದ್ದು ಸಮಯೋಚಿತವಾಗಿದೆ.

ಕರ್ನಾಟಕವು ಅನೇಕ ವರ್ಷಗಳ ಕಾಲದಿಂದ ಶಿಕ್ಷಣದ ಆಗರ. ಶತಮಾನಗಳ ಹಿಂದೆ ದಯೆ, ಅಹಿಂಸೆಯನ್ನು ಬೋಧಿಸಿದ ಜೈನಧರ್ಮದ ನೆಲೆಯಾದ ಈ ನಾಡು ಸಹನೆಯ ತವರು. ಜೈನಧರ್ಮವು ನಮಗೆ ಪ್ರಖ್ಯಾತ ಗೊಮ್ಮಟೇಶ್ವರನ ಶಿಲಾಮೂರ್ತಿಯನ್ನೂ, ಕನ್ನಡ ಸಾಹಿತ್ಯದ ರತ್ನತ್ರಯರಾದ ಪಂಪ, ರನ್ನ, ಜನ್ನ ರನ್ನೂ ಅನುಗ್ರಹಿಸಿತು. ನಂತರ ಉದಯಿಸಿದ್ದು ಬಸವೇಶ್ವರ, ಹರಿಹರ, ಕುಮಾರ ವ್ಯಾಸ ಮತ್ತು ಪುರಂದರದಾಸರ ಭಕ್ತಿಪಂಥ. ಬಸವಣ್ಣನವರ ವಚನವು ಈ ಸಹನ ಶೀಲತೆಯನ್ನು ಅನನ್ಯ ರೀತಿಯಲ್ಲಿ ಬಣ್ಣಿಸುತ್ತದೆ.

> ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ ?
> ತನಗಾದ ಆಗೇನು ಅವರಿಗಾದ ಬೇಗೆಯೇನು ?
> ತನುವಿನ ಕೋಪ ತನ್ನ ಹಿರಿತನದ ಕೇಡು
> ಮನದ ಕೋಪ ತನ್ನ ಅರಿವಿನ ಕೇಡು
> ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡುವುದೇ
> ಕೂಡಲ ಸಂಗಮದೇವಾ.

ಈ ವಚನವು ಅಂದಿಗೂ, ಇಂದಿಗೂ, ಭಾರತಕ್ಕೆ ಅಷ್ಟೇ ಅಲ್ಲ, ಇಡೀ ವಿಶ್ವಕ್ಕೇ ಅನ್ವಯಿಸುವಂತಹುದಾಗಿದೆ.

ಕಲಾ ಕ್ಷೇತ್ರದಲ್ಲಿಯೂ ಕರ್ನಾಟಕದ್ದು ಭವ್ಯ ಪರಂಪರೆ. ಕರ್ನಾಟಕದ ಉದ್ದಗಲಕ್ಕೂ ಈ ಪರಂಪರೆಯ ಅವಶೇಷಗಳನ್ನು ಕಾಣಬಹುದು: ಹಂಪೆಯ ಅಮರ ಸ್ಮಾರಕಗಳು, ಬೇಲೂರ – ಹಳೇಬೀಡಿನ ಮನೋಹರ ಶಿಲಾಬಾಲಿಕೆಯರು, ಬಿಜಾಪುರದ ಗೋಲಗುಮ್ಮಟ ಮತ್ತು ಇಲ್ಲಿ ಚಾಮುಂಡಿ ಬೆಟ್ಟದಲ್ಲಿ ನಂದಿ.

ಕರ್ನಾಟಕದ ಕೊಡುಗೆ ಗತಕಾಲದ ವೈಭವ ಮತ್ತು ಪರಂಪರೆಗೆ ಮಾತ್ರ ಸೀಮಿತವಾಗಿಲ್ಲ. ಕರ್ನಾಟಕವು ಈಗಲೂ ಸಹ ಮುಂಚೂಣಿಯಲ್ಲಿಯೇ ಇದೆ. ನೀವು ಈಗ ತಾನೇ ಹೇಳಿದ ನಿಮ್ಮ ನಾಲ್ವರು ಶ್ರೇಷ್ಠ ಬರಹಗಾರರು – ಶಿವರಾಮ ಕಾರಂತರು (ಈಗ ನಮ್ಮ ಬಳಿ ಇದ್ದಾರೆ) ಕುವೆಂಪು, ಮಾಸ್ತಿಯವರು (ಈ ದಿನ ಬರಬಹುದು) ಮತ್ತು ದ. ರಾ. ಬೇಂದ್ರೆಯವರು, ಜ್ಞಾನಪೀಠ ಪ್ರಶಸ್ತಿ ವಿಜೇತರು. ಗೋಕಾಕ್, ಡಿ. ವಿ. ಗುಂಡಪ್ಪ, ಆರ್. ಕೆ. ನಾರಾಯಣ್, ಎ. ಕೆ. ರಾಮಾನುಜನ್ ಅವರಂತಹ ಇತರ ಪ್ರಖ್ಯಾತ ಸಾಹಿತಿಗಳು ಸಾಹಿತ್ಯಶ್ರೀಯನ್ನು

ಸಂಪನ್ನಗೊಳಿಸಿದ್ದಾರೆ. ನಾಟಕ ಮತ್ತು ಸಿನಿಮಾ ರಂಗಗಳಲ್ಲಿ ಗಿರೀಶ ಕಾರ್ನಾಡ್ ಮತ್ತು ಬಿ. ವಿ. ಕಾರಂತರನ್ನು ನೀವು ನೀಡಿದ್ದೀರಿ. ಕರ್ನಾಟಕ ಸಂಗೀತವು ವಿಶ್ವ ವಿಖ್ಯಾತ. ವಿಶ್ವೇಶ್ವರಯ್ಯ, ಡಾ॥ ರಾಮಣ್ಣನವರಂತಹ ನಿಮ್ಮ ಇಂಜನಿಯರುಗಳು ಮತ್ತು ವಿಜ್ಞಾನಿಗಳು, ವ್ಯಂಗ್ಯ ಚಿತ್ರಕಾರ ಆರ್. ಕೆ. ಲಕ್ಷ್ಮಣ್, ಸಮಾಜ ವಿಜ್ಞಾನಿ ಎಮ್. ಎನ್. ಶ್ರೀನಿವಾಸ್ ಮತ್ತು ಅರ್ಥಶಾಸ್ತ್ರಜ್ಞ ಡಾ॥ ವಿ. ಕೆ. ಆರ್. ವಿ. ರಾವ್ ಅವರೆಂದರೆ ನಮಗೆ ಹೆಮ್ಮೆ.

ಆಧುನಿಕ ಭಾರತಕ್ಕೆ ನಿಮ್ಮ ಕಾಣಿಕೆಯ ಮಾದರಿಯಾಗಿ ಕೆಲವು ಹೆಸರುಗಳನ್ನು ಮಾತ್ರವೇ ನಾನು ಹೇಳಿದ್ದೇನೆ. ಪರಂಪರೆಯನ್ನು ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲು ಸಾಧ್ಯವಿಲ್ಲ. ಪರಂಪರೆಯಿಂದ ಬಂದ ಸಂಪ್ರದಾಯ, ಸಂಸ್ಕೃತಿಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿ, ವರ್ಧಿಸಿಕೊಂಡಾಗ ಮಾತ್ರ ಅದಕ್ಕೆ ಬೆಲೆಯಿರುತ್ತದೆ ಮತ್ತು ಮುಂಬರುವ ಪೀಳಿಗೆಗೆ ಇನ್ನೂ ಉತ್ತಮವಾದ, ಶ್ರೀಮಂತವಾದ ಸಂಸ್ಕೃತಿಯನ್ನು ನೀಡಲು ನಮಗೆ ಸಾಧ್ಯವಾಗುತ್ತದೆ.

ಕರ್ನಾಟಕವು ಈ ಬೆಳವಣಿಗೆಗೆ ಸಂಪೂರ್ಣವಾಗಿ ನೆರವಾಗಿದೆ. ಬಿ. ಎಮ್. ಶ್ರೀಕಂಠಯ್ಯನವರ ಕವನವೊಂದನ್ನು ಇಲ್ಲಿ ನಿದರ್ಶಿಸಬಹುದು:

ಸವಿಯ ಹಾಡ, ಕಥೆಯ ಕಟ್ಟಿ.
ಕಿವಿಯಲೆರೆದು, ಕರುಳ ತಟ್ಟಿ,
ನಮ್ಮ ಜನರು, ನಮ್ಮ ನಾಡು,
ಎನಿಸಿತಾವುದು –
ನಮ್ಮ ಕವಿಗಳೆಂಬ ಕೋಡು
ತಲೆಗದಾವುದು –
ಕನ್ನಡ ನುಡಿ ನಮ್ಮ ಹೆಣ್ಣು.
ನಮ್ಮ ತೋಟದಿನಿಯ ಹಣ್ಣು.

ಕರ್ನಾಟಕವು ಆಧುನಿಕತೆಯ ಆದ್ಯ ಪ್ರವರ್ತಕ. ನಾನು ಹೇಳಿದ ಕೆಲವು ಹೆಸರುಗಳು, ಕರ್ನಾಟಕವು ಭಾರತಕ್ಕೆ ನೀಡಿದ ಮುಖಂಡತ್ವ ಮತ್ತು ಮಾರ್ಗದರ್ಶನದ ಸಂಕೇತವಾಗಿವೆ. ನಿಮ್ಮ ಜಲವಿದ್ಯುತ್ ಕೇಂದ್ರಗಳು, ಭಾರತೀಯ ವಿಜ್ಞಾನ ಸಂಸ್ಥೆ, ಮೂಲಭೂತ ಸಂಶೋಧನಾಭಿವೃದ್ಧಿ, ಅನೇಕ ಬೃಹತ್ ಸರ್ಕಾರಿ ಉದ್ಯಮ ಸಂಸ್ಥೆಗಳು – ಇವೆಲ್ಲ ಕರ್ನಾಟಕದ ಚೈತನ್ಯಶೀಲತೆಯ ಪ್ರತೀಕಗಳು. ನೀವು ಇದೀಗ ನೀರಾವರಿಯ ವಿಚಾರ ಹೇಳಿದಿರಿ. ಇಲ್ಲಿ ಉಪಸ್ಥಿತರಾಗಿರುವ ಕನ್ನಡದ ಮಂತ್ರಿ ಶ್ರೀ ಬಿ. ಶಂಕರಾನಂದರು ನಾವು ಏನು ಮಾಡಬಹುದೆಂಬುದನ್ನು ಪರಿಶೀಲಿಸುತ್ತಾರೆಂಬ ಭರವಸೆ ನನಗಿದೆ.

ಭಾರತದಲ್ಲಿ ಪ್ರಜಾಪ್ರಭುತ್ವವು ಪದಾರ್ಪಣಮಾಡಿದ ಮೊಟ್ಟ ಮೊದಲನೆಯ ರಾಜ್ಯವೂ ಸಹ ಕರ್ನಾಟಕವೇ. ಮೈಸೂರು ಸಂಸ್ಥಾನದಲ್ಲಿ ೧೮೮೧ ರಲ್ಲಿ, ಅಂದರೆ ನೂರು ವರ್ಷಗಳಿಗೂ ಹಿಂದೆಯೇ, ಮೊಟ್ಟ ಮೊದಲಿಗೆ ಚುನಾಯಿತ ಪ್ರತಿನಿಧಿಗಳ ಪ್ರವೇಶವಾಯಿತು. ಸ್ವಾತಂತ್ರ್ಯ ಸಂಗ್ರಾಮದ ಪ್ರಖ್ಯಾತರ ಸಾಲಿಗೆ ಕರ್ನಾಟಕದ ಕೊಡುಗೆಯೂ ಕಿರಿದೇನಲ್ಲ. ನಾವು ಇಂದು ಸ್ವತಂತ್ರರಾಗಿರಲು ಗಂಗಾಧರರಾವ್ ದೇಶಪಾಂಡೆ, ಎನ್. ಎಸ್. ಹರ್ಡೀಕರ್, ಕಾರ್ನಾಡ್ ಸದಾಶಿವರಾವ್, ಹೆಚ್. ಸಿ. ದಾಸಪ್ಪ, ಯು. ಶ್ರೀನಿವಾಸ ಮಲ್ಯ—ಇವರೆಲ್ಲರ ತ್ಯಾಗ ಅಪಾರ. ಇವರೆಲ್ಲರೂ ಕರ್ನಾಟಕದ ಮಹಾನ್ ಪರಂಪರೆಗೆ ನೀಡಿದ ಕೊಡುಗೆಯನ್ನು ನಾವು ಸ್ಮರಿಸಬೇಕು.

ನಮ್ಮೆಲ್ಲರನ್ನೂ ಒಟ್ಟುಗೂಡಿಸುವಂತಹ ನಮ್ಮ ದೇಶದ ಎಲ್ಲ ಭಾಷೆಗಳೂ ರಾಷ್ಟ್ರೀಯ ಭಾಷೆಗಳೇ ಎಂದು ಪಂಡಿತಜೀ ಬಹಳ ಹಿಂದೆಯೇ ಹೇಳಿದ್ದರು. ತಮಿಳು, ಮರಾಠಿ, ತೆಲುಗು, ಉರ್ದು, ಸಂಸ್ಕೃತ ಮತ್ತು ಹಿಂದಿ ಮುಂತಾದ ಅನೇಕ ಭಾಷೆಗಳ ಸಾಹಿತ್ಯಗಳ ಒಡನಾಟದಿಂದ ಕನ್ನಡ ಸಾಹಿತ್ಯವು ಪ್ರಯೋಜನ ಹೊಂದಿದೆ. ಭಾರತದಲ್ಲಿನ ಇತರ ಯಾವುದೇ ರಾಜ್ಯಕ್ಕಿಂತ ಕರ್ನಾಟಕದಲ್ಲಿ ಭಾಷಾಂಧತೆಯು ಇಲ್ಲವೆಂದೇ ಹೇಳಬಹುದು. ಭಾಷೆಗಳ ಮಧ್ಯೆ ಗೋಡೆಕಟ್ಟುವ ಯತ್ನವಿಲ್ಲ.

ಪ್ರತಿ ಪೀಳಿಗೆಯಲ್ಲಿಯೂ ಸಾಂಸ್ಕೃತಿಕ ಸಂಪ್ರದಾಯ ಮತ್ತು ಪರಂಪರೆಯನ್ನು ಪುನರುಜ್ಜೀವನಗೊಳಿಸಿ ಪ್ರಜ್ವಲಗೊಳಿಸಬೇಕು. ಈ ಪರಂಪರೆ, ಈ ಸಂಪ್ರದಾಯ ಮತ್ತು ಈ ಸಂಸ್ಕೃತಿಯನ್ನು ಹೇಗೆ ಶಕ್ತಿಯುತಗೊಳಿಸಬಲ್ಲಿರಿ ಎಂಬುದೇ ನಿಮ್ಮ ಈ ಸಮ್ಮೇಳನದ ಮುಂದಿರುವ ಗುರುತರ ಕಾರ್ಯ. ಭಾರತದ ಶಕ್ತಿಯು ಕೇವಲ ಒಂದು ಸಂಸ್ಕೃತಿಯನ್ನು ಬೆಳೆಸುವ ಪ್ರಯತ್ನದಲ್ಲಿಲ್ಲ. ಪ್ರತಿ ಸಂಸ್ಕೃತಿಯು ಸ್ವತಂತ್ರ ರೀತಿಯಲ್ಲಿ ಪರಿಪೂರ್ಣವಾಗಿ ವಿಕಸಿಸುವಂತೆ ಮಾಡುವುದರಲ್ಲಿ, ಮತ್ತು ಈ ಸಂಸ್ಕೃತಿಗಳು ಪರಸ್ಪರ ಒಡನಾಟದ ಪ್ರಭಾವದಿಂದ ಅತ್ಯುತ್ತಮ ಭಾರತೀಯ ಸಂಸ್ಕೃತಿಯೊಂದನ್ನು ಬೆಳೆಸುವುದರಲ್ಲೇ ಭಾರತದ ಶಕ್ತಿಯು ಅಡಗಿದೆ. ತನ್ನದೇ ಆದ ದಿಸೆಯಲ್ಲಿ ತನ್ನದೇ ಆದ ಪರಂಪರೆಯೊಡನೆ ನಮ್ಮ ದೇಶದ ಪ್ರತಿಯೊಂದು ಭಾಗದ ಸಂಸ್ಕೃತಿಯನ್ನೂ ಅಭಿವೃದ್ಧಿಗೊಳಿಸಿ, ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದ ಮುನ್ನಡೆಯೊಡನೆ ಸಮನ್ವಯಗೊಳಿಸುವುದೇ ನಮ್ಮ ಮುಂದಿರುವ ಪ್ರಮುಖ ಸವಾಲಾಗಿದೆ.

ವಿಶ್ವದಾದ್ಯಂತ ಅದರಲ್ಲಿಯೂ ವಿಶೇಷವಾಗಿ ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ, ತೀವ್ರಗತಿಯಲ್ಲಿ ಪ್ರಗತಿಯನ್ನು ಹೊಂದುತ್ತಿವೆ. ನಾವು ಬಹಳ

ತಡವಾಗಿ ಪ್ರಾರಂಭಿಸಿದ್ದರಿಂದ ಇದು ನಮ್ಮ ಮುಂದೆ ಬೃಹತ್ ಸಮಸ್ಯೆಯಾಗಿ ಪರಿಣಮಿಸಿದೆ. ಅದು ಮಾನವನಿಗೆ ಒಂದು ದೊಡ್ಡ ಸಮಸ್ಯೆಯನ್ನು ಒಡ್ಡುತ್ತದೆ. ಭಾರತವು ಸಾಂಪ್ರದಾಯಿಕವಾಗಿ ಜನಸಾಮಾನ್ಯರ ಆಧ್ಯಾತ್ಮಿಕ ಔನ್ನತ್ಯದತ್ತ ತನ್ನ ಗಮನವನ್ನು ಕೇಂದ್ರೀಕರಿಸಿತ್ತು. ಬಹುಶಃ ಇದೂ ಸಹ ನಮ್ಮ ಪರಂಪರೆ ಮತ್ತು ಸಂಸ್ಕೃತಿಯ ಗಹನತೆಯನ್ನು ಸೂಚಿಸುತ್ತದೆ.

ಈಗ ವಿಜ್ಞಾನ ಮತ್ತು ತಾಂತ್ರಿಕತೆ ನಮ್ಮ ಮುಂದೆ ದೊಡ್ಡ ಸವಾಲಾಗಿ ನಿಂತಿದೆ. ನಾವು ಮಾನವನನ್ನು ಬೆಳೆಸಬೇಕು. ಅವನಲ್ಲಿನ ಆಧ್ಯಾತ್ಮಿಕತೆ ಮತ್ತು ಮಾನವೀಯತೆಯನ್ನು ಬೆಳೆಸಬೇಕು. ಅವನಲ್ಲಿ ಅಂತರ್ಗತವಾಗಿರುವ ಮಾನವತ್ವ ವನ್ನೂ ಸಹ ಸಮಾನ ರೀತಿಯಲ್ಲಿ ಬೆಳೆಸಬೇಕು. ವಿಜ್ಞಾನ ಮತ್ತು ತಾಂತ್ರಿಕತೆಯು ನಮ್ಮನ್ನು ಆಕ್ರಮಿಸಿಕೊಂಡು ಮನುಷ್ಯರು ತಮ್ಮ ಮಾನವೀಯತೆ ಹಾಗೂ ಆಂತರಿಕ ಆಧ್ಯಾತ್ಮಿಕತೆಯನ್ನು ಕಳೆದುಕೊಳ್ಳುವಂತಾಗಬಾರದು. ಸಂಪ್ರದಾಯ ಪೂರ್ವಕ ವಾಗಿ ಆಧ್ಯಾತ್ಮಿಕಶಕ್ತಿಯು ಮೇಲುಗೈ ಆಗಿರುವ ಭಾರತಕ್ಕೆ ಇದು ಇನ್ನೂ ವಿಶೇಷ ವಾಗಿ ಅನ್ವಯಿಸುತ್ತದೆ.

ಆಧ್ಯಾತ್ಮಿಕತೆ ಭಾರತೀಯರನ್ನೆಲ್ಲಾ ಒಂದುಗೂಡಿಸುವ ಶಕ್ತಿಯಾಗಿದ್ದು, ಭಾರತದ ಮಹಾನ್ ಬಲವೂ ಆಗಿದೆ. ಒಂದು ಧರ್ಮದ ಜನರು, ಇನ್ನೊಂದು ಧರ್ಮದ ಪವಿತ್ರ ಸ್ಥಳಗಳಿಗೆ ಭೇಟಿ ಕೊಡುವುದನ್ನು ಬಹುಶ; ಭಾರತದಲ್ಲಿ ಮಾತ್ರವೇ ಕಾಣಬಹುದು. ಈ ಅಗಾಧ ಆಧ್ಯಾತ್ಮಿಕ ಶಕ್ತಿಯು ನಮ್ಮಲ್ಲಿರುವುದರಿಂದಲೇ ಈ ಆಧುನಿಕ ಪ್ರಗತಿಯ ಸವಾಲನ್ನು ಆತ್ಮವಿಶ್ವಾಸದಿಂದ ನಾವು ಎದುರಿಸಬಲ್ಲೆವು.

ಕೊನೆಯದಾಗಿ ಒಂದು ಮಾತು ಹೇಳಿ ನನ್ನ ಭಾಷಣವನ್ನು ಮುಗಿಸುತ್ತಿದ್ದೇನೆ. "ಈಸಬೇಕು ಇದ್ದು ಜೈಸಬೇಕು" (೧೬–೧೨–೧೯೮೫)

ನಿಮ್ಮೊಂದಿಗೆ **೨ ನೇ ಪುಟದಿಂದ**

ಶಾಸ್ತ್ರಜ್ಞ ಡಾ॥ ಜೆ. ಸಿ. ಕುಮಾರಪ್ಪ, ಗಾಂಧೀಜಿಯ ಶ್ರೇಷ್ಠ ಅನುಯಾಯಿ ಮೀರಾ ಬಹನ್ (ಮಿಸ್ ಸ್ಲೇಡ್), ಗಾಂಧೀಜಿ ವಿಚಾರದ ಭಾಷ್ಯಕಾರ ಕಿಶೋರಲಾಲ ಮಶ್ರು ವಾಲ ಹಾಗೂ ಕರ್ನಾಟಕದ ಶ್ರೇಷ್ಠ ರಚನಾತ್ಮಕ ಕಾರ್ಯಕರ್ತರಾಗಿ ಹೋದ ಪಂಡಿತ ತಾರಾನಾಥ, ಹಾಗೂ ಕನ್ನಡದ ಆಸ್ತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್. ಇವರುಗಳ ಶತಮಾನೋತ್ಸವವನ್ನ ಭಾರತೀಯರು ಆಚರಿಸಬೇಕಾಗಿದೆ. ದೇಶ ಮಾನಸಿಕವಾಗಿ ಹಿಂಜರಿತ ಅನುಭವಿಸುತ್ತಿರುವಾಗ, ಹೊಸ ಧೈರ್ಯ, ನಂಬುಗೆ, ದಾರಿ ಬೇಕಿರುವಾಗ ಈ ಮಹಾನುಭಾವರ ವಿಚಾರಗಳು ನಮಗೆ ಉಪಯೋಗಕಾರಿ ಯಾಗಬಲ್ಲವು. ಇದನ್ನು ಬಲ್ಲವರು ಜನಸಾಮಾನ್ಯರಿಗೆ ತಿಳಿಸುವ ಕೆಲಸವನ್ನು ಶ್ರದ್ಧೆ ಯಿಂದ ಮಾಡಬೇಕಾಗಿದೆ.

★ **ಸುರೇಂದ್ರ ಕೌಲಗಿ**

ಐಕ್ಯಮತ್ಯ ರಕ್ಷಿಸಿ, ಭಯೋತ್ಪಾದನೆ ನಿರ್ನಾಮ ಮಾಡಿ

ರಾಜೀವ್ ಗಾಂಧೀ

ನಾವು ಈ ದಿನ ಕೆಂಪುಕೋಟೆಯಲ್ಲಿ ನಲವತ್ತನೆಯ ಸಲ ಒಟ್ಟು ಗೂಡುತ್ತಿದ್ದೇವೆ. ಈ ಕೆಂಪುಕೋಟೆಯು ಭಾರತದ ವೈಭವದ ಸಂಕೇತ. ಇದು ಭಾರತದ ಶಕ್ತಿಯ ಸಂಕೇತ. ಈ ಸ್ಥಳದಿಂದಲೇ, ೧೮೫೭ ರಲ್ಲಿ ಸ್ವಾತಂತ್ರ್ಯದ ಮೊದಲನೆಯ ಕೂಗನ್ನು ಘೋಷಿಸಿದ್ದುದು. ಈ ಸ್ಥಳದಲ್ಲೇ, ಸುಭಾಷ್ ಚಂದ್ರಬೋಸರ ಅನುಯಾಯಿಗಳಾದ ಷಾಹನವಾಜ್, ದಿಲ್ಲಾನ್ ಮತ್ತು ಸಹಗಲ್‌ರವರು ವಿಚಾರಣೆಗೊಳಪಟ್ಟರು. ಅವರು ದೇಶಭಕ್ತಿಗಾಗಿ ಮಾಡಿದ ತ್ಯಾಗಕ್ಕೆ ಮಿಗಿಲಾದುದು ಬೇರೊಂದಿಲ್ಲ. ಈ ಸ್ಥಳದಲ್ಲೇ ಬ್ರಿಟೀಷರ ಧ್ವಜವನ್ನು ಕೆಳಗಿಳಿಸಿದುದು ಮತ್ತು ಮೊದಲ ಬಾರಿಗೆ ಭಾರತ ತ್ರಿವರ್ಣ ಧ್ವಜವನ್ನು ಪಂಡಿತಜೀ ಆರೋಹಣ ಮಾಡಿದರು. ಈ ಧ್ವಜವು ನಮ್ಮ ಹೃದಯಕ್ಕೆ ಅಚ್ಚುಮೆಚ್ಚಿನದಾಗಿದ್ದು, ನಮ್ಮ ಗಾಢವಾದ ಗೌರವವನ್ನು ಸಂಪಾದಿಸಿದೆ. ಈ ಧ್ವಜದಡಿಯಲ್ಲ ದೇಶದ ರಕ್ಷಣೆಗಾಗಿ ಮತ್ತು ಪ್ರಗತಿಗಾಗಿ ಹೋರಾಡುತ್ತೇವೆ. ನಾವೆಲ್ಲರೂ ಭಾರತಮಾತೆಯ ಮಕ್ಕಳು. ನಾವು ಭಾರತವನ್ನು ಶಾಂತಿಯ ತವರನ್ನಾಗಿ ಮಾಡುತ್ತೇವೆ. ಭಾರತವನ್ನು ಸಂಪದ್ಭರಿತ ಭೂಮಿಯನ್ನಾಗಿ ಮಾಡುತ್ತೇವೆ.

ನಾವು ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದ್ದೇವೆ. ಹಾಗೆಯೇ ನಾವು ಸ್ವಾತಂತ್ರ್ಯವೆಂದರೆ ಏನೆಂದು ಅರ್ಥ ಮಾಡಿಕೊಂಡಿದ್ದೇವೆಯೇ? ನಾವು ಈ ದಿನ ಸಾಧಿಸಿದ ಸ್ವಾತಂತ್ರ್ಯವು ನಮಗೆ ಏನು ಅರ್ಥವನ್ನು ಕೊಡುತ್ತದೆ? ಸ್ವಾತಂತ್ರ್ಯವೆಂದರೆ, ಜನಗಳ ಸ್ವಾತಂತ್ರ್ಯವೆಂದರ್ಥವೆ? ಅಥವಾ ನಮ್ಮ ಭೂಮಿ, ಅಡವಿಗಳು–ಮತ್ತು ಸಮಗ್ರ ವಾತಾವರಣದ ಬಗ್ಗೆ ಯೋಚಿಸುತ್ತೇವೆಯೇ? ನಮ್ಮ ದೇಶದ ಅಭಿವೃದ್ಧಿ ಮತ್ತು ಪ್ರಗತಿಯನ್ನು ಕುರಿತು ಯೋಚಿಸುತ್ತೇವೆಯೇ? ಹೌದು, ಇವೆಲ್ಲಾ ಸ್ವಾತಂತ್ರ್ಯದ ಅಂಗಗಳಾಗಿವೆ. ಸ್ವಾತಂತ್ರ್ಯವು ಆಳವಾದ, ಮೂಲಭೂತ ಅರ್ಥವನ್ನು ಹೊಂದಿದೆ. ನಮ್ಮ ಪುರಾತನ ಸಂಸ್ಕೃತಿ, ನಮ್ಮ ಮೌಲ್ಯವನ್ನು ನಾವು ಮರೆಯುವಂತಿಲ್ಲ ಮತ್ತು ನಮ್ಮ ನೀತಿನಿಷ್ಠೆಯ ಮಾರ್ಗದಿಂದ ವಿಚಲಿತರಾಗಬಾರದು. ನಮ್ಮ ಸಂಪ್ರದಾಯವನ್ನು ಅನುಸರಿಸುವುದನ್ನು ಮತ್ತು ನಮ್ಮ ಪಿತ್ರಾರ್ಜಿತವನ್ನು ತಪ್ಪದೆ ಉಳಿಸಿಕೊಂಡುಬರುವುದನ್ನು ನಾವು ಖಾತ್ರಿ ಮಾಡಿಕೊಳ್ಳಬೇಕು.

ಈ ಮೌಲ್ಯಗಳಾವುವು? ಪ್ರಧಾನವಾಗಿ ಕಾಣಿಸುವುದು ರಾಷ್ಟ್ರೀಯತೆಯ ಭಾವನೆ. ಈ ರಾಷ್ಟ್ರೀಯತೆಯ ಭಾವನೆಯು ಭಾರತಕ್ಕೇನೂ ಹೊಸದಲ್ಲ. ಇದು ಬಹಳ ಹಿಂದಿನ ಕಾಲದಿಂದಲೂ, ಸಾವಿರಾರು ವರ್ಷಗಳಿಂದಲೂ ಭಾರತದ ಪ್ರಜೆಗಳ ಹೃದಯದಲ್ಲಿ ಮತ್ತು ಮನಸ್ಸಿನಲ್ಲಿ ಗಾಢವಾಗಿ ನಾಟಿದೆ. ಇದನ್ನು ಉಚ್ಚಾಟನೆ ಮಾಡಲು ಯಾರಿಂದಲೂ ಸಾಧ್ಯವಾಗಿಲ್ಲ. ನಾವು ರಾಜಕೀಯ ಒಗ್ಗಟ್ಟನ್ನು ಹೊಂದಿರದಿದ್ದರೂ, ವಿದೇಶೀಯರ ಆಡಳಿತದ ಕೈಕೆಳಗಿದ್ದರೂ ಭಾರತೀಯರೆಂಬ ಭಾವನೆಯನ್ನು ನಮ್ಮಿಂದ ಅಳಿಸಿಹಾಕಲು ಯಾರಿಂದಲೂ ಸಾಧ್ಯವಾಗಿಲ್ಲ. ಇಂದಿನ ಸ್ವತಂತ್ರ ಭಾರತವು ವೈಭವ ಪೂರ್ಣ, ಸ್ವಾವಲಂಬಿತ, ಏಕತೆ ಮತ್ತು ಸಮಗ್ರತೆಗೆ ಕಟಿಬದ್ಧವಾಗಿರುವ ರಾಷ್ಟ್ರೀಯ ಭಾವೈಕ್ಯದ ನಿದರ್ಶನವಾಗಿದೆ.

ಪ್ರಾಚೀನ ಮೌಲ್ಯಗಳು

ಸಿರಿಸಂಪತ್ತುಗಳನ್ನು ಗಳಿಸುವುದರಿಂದ ಮಾತ್ರ ಅಭಿವೃದ್ಧಿ ಸಾಧ್ಯವಿಲ್ಲವೆಂಬ ಅರಿವನ್ನುಂಟುಮಾಡುವ ಪುರಾತನ ತತ್ವಶಾಸ್ತ್ರಗಳ ಪರಂಪರೆಯ ದೃಷ್ಟಿಯನ್ನು ನಾವು ಕಳೆದುಕೊಳ್ಳಲಾರೆವು. ಸಂಪತ್ತಿನ ಸಂಗ್ರಹವು ದುರಾಶೆ ಮತ್ತು ಸ್ವಾರ್ಥಕ್ಕೆ ಎಡೆ ಮಾಡಿಕೊಡುತ್ತದೆ. ಇದು ಅತೃಪ್ತಿಗೆ ಕಾರಣವಾಗಿ ವ್ಯಥೆಗೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ ನಾವು ಅಭಿವೃದ್ಧಿಯನ್ನು ಸಾಧಿಸುವಾಗ, ನೈತಿಕ ಮೌಲ್ಯಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ಸಾವಿರಾರು ವರ್ಷಗಳಿಂದ ನಮ್ಮನ್ನು ಸಂರಕ್ಷಿಸಿದ ಮತ್ತು ನಮ್ಮನ್ನು ಒಂದಾಗಿರಿಸಿದ, ನಮ್ಮ ಸಂಸ್ಕೃತಿಯ ಪರಂಪರೆ, ಪ್ರಾಚೀನತೆಯ ಹಿರಿಮೆಯನ್ನು ಘೋಷಿಸುವುದೇ ಅಲ್ಲದೆ ರಕ್ಷಿಸುವುದನ್ನೂ ನಾವು ನೋಡಿಕೊಳ್ಳಬೇಕು. ಸ್ವಾತಂತ್ರ್ಯ ಬಂದಾಗಿನಿಂದ ನಾವು ಮಹತ್ತರ ಪ್ರಗತಿಯನ್ನು ಸಾಧಿಸಿದ್ದೇವೆ. ಈ ಪ್ರಗತಿಯ ಚಿಹ್ನೆಗಳು ಎಲ್ಲಾ ಕ್ಷೇತ್ರಗಳಲ್ಲೂ ಕಾಣಿಸುತ್ತಿವೆ. ಹಾಗಾಗಿ ನಾವು ಭವಿಷ್ಯತ್ತನ್ನೂ ನೋಡಿಕೊಳ್ಳಬೇಕು ಮತ್ತು ಅದು ಇನ್ನೂ ಉಜ್ವಲವಾಗುವಂತೆ ಖಾತ್ರಿಮಾಡಿಕೊಳ್ಳಬೇಕು. ಇದಕ್ಕೆ ಪ್ರಬಲವಾದ ಅಪಾಯ ಒಂದುಂಟು. ಅದೇ ಕೋಮುವಾರು ಭಾವನೆ. ಜನಗಳನ್ನು ಕೊಲ್ಲುವುದು, ಮನೆಗಳನ್ನು ಸುಡುವುದು ಮತ್ತು ಅಂಗಡಿಗಳನ್ನು ಲೂಟಿ ಮಾಡುವುದು ಇವೆಲ್ಲ ನಾಚಿಸುವಂತಹ ವಿಷಯ ಮತ್ತು ರಾಷ್ಟ್ರಕ್ಕೇ ಅಪಾಯಕಾರಿ. ಈ ವಿಧವಾಗಿ ನಾವು ವರ್ತಿಸಲು ಸಾಧ್ಯವಿಲ್ಲ. ಅಲ್ಲದೆ ನಾವು ಇದನ್ನು ಪುನರಾವರ್ತಿಸಲು ಬಿಡುವುದಿಲ್ಲ. ಯಾವುದೇ ರೀತಿಯ ಹಿಂಸೆಯು ತಪ್ಪು. ಅದರಲ್ಲೂ ಧರ್ಮದ ಹೆಸರಿನಲ್ಲಿ ನಡೆಯುವ ಹಿಂಸೆ ಅತ್ಯಂತ ಹೀನವಾದದ್ದು. ಇದು, ವಾಸ್ತವವಾಗಿ, ಧರ್ಮದ ಹೆಸರಿನಲ್ಲಿ ಮಾಡುವ ವಂಚನೆ. ನಿಜವಾದ ಧರ್ಮವೆಂದರೆ ಪ್ರೀತಿ ಮತ್ತು ಸಹನೆ, ಎಲ್ಲರನ್ನು ಪ್ರೀತಿಸುವುದು ಮತ್ತು ಎಲ್ಲ ಧರ್ಮಗಳಿಗೆ ಗೌರವವನ್ನು ನೀಡುವುದು.

ವಿವಿಧ ಧರ್ಮಗಳು, ವಿವಿಧ ಮಾರ್ಗಗಳಾಗಿದ್ದು, ಒಂದೇ ಗುರಿಯನ್ನು ಮುಟ್ಟು ತ್ತವೆ. ದೇವರನ್ನು ಸೇರಲು ವಿವಿಧ ಮಾರ್ಗಗಳಿವೆ.

ಕೋಮುವಾರು ಭಾವನೆಯ ಉಚ್ಚಾಟನೆ

ನಮ್ಮ ದೇಶದಲ್ಲಿ ಸನಾತನವಾದವು ಸರ್ಪ ಹೆಡೆಯೆತ್ತುತ್ತಿದೆ. ಈ ಸನಾತನ ವಾದವು ದ್ವೇಷಕ್ಕೆ ಮತ್ತು ಹಿಂಸೆಗೆ ದಾರಿ ಮಾಡಿಕೊಡುತ್ತದೆ. ಸರ್ಕಾರವು ಇದನ್ನು ಅಳಿಸಿಹಾಕಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಬಲ ಪ್ರಯೋಗವು ಅವಶ್ಯವೆಂದು ಕಂಡುಬಂದರೆ, ಇದನ್ನು ಉಪಯೋಗಿಸಲೂ ಹಿಂಜರಿ ಯುವುದಿಲ್ಲ. ನಾವು ಈ ಸನಾತನವಾದ ಮತ್ತು ಹಿಂಸೆಯನ್ನು ಹರಡಲು ಬಿಡುವು ದಿಲ್ಲ, ನಮ್ಮ ಸಮಾಜದಿಂದ ಇದನ್ನು ತೊಡೆದುಹಾಕುತ್ತೇವೆ.

ಹಿಂದಿನ ವರ್ಷ, ನಾನು ಇಲ್ಲಿಂದ ಮಾತನಾಡುತ್ತಿದ್ದಾಗ, ಪಂಜಾಬ್ ಒಪ್ಪಂದಕ್ಕೆ ನಾವು ಸಹ ಹಾಕಿದ್ದೆವು. ನಂತರ ಮಾತುಕತೆಗಳು ನಡೆದವು ಮತ್ತು ಇದರಲ್ಲಿ ಬಹಳಷ್ಟು ವಿಷಯಗಳು ಚರ್ಚಿಸಲ್ಪಟ್ಟವು. ಪಂಜಾಬಿನಲ್ಲಿ ಚುನಾವಣೆ ನಡೆಯಿತು. ಪ್ರಜಾ ಸರ್ಕಾರ ಆಡಳಿತಕ್ಕೆ ಬಂತು. ಪ್ರಜಾ ರಾಜ್ಯವು ಮತ್ತೆ ಅಸ್ತಿತ್ವಕ್ಕೆ ಬಂತು. ಈ ಒಪ್ಪಂದದಿಂದಾಗಿ ಪಂಜಾಬಿನಲ್ಲಿ ಭಯೋತ್ಪಾದಕರು ಮತ್ತು ಉಗ್ರವಾದಿಗಳೊಡನೆ ಹೋರಾಡಲು ಸಮರ್ಥರಾಗಿದ್ದೆವು. ಇದರ ಜೊತೆಗೆ, ಪೋಲೀಸರ ತರಬೇತಿಯನ್ನು ಒದಗಿಸುವುದಕ್ಕೆ, ನಾವು ಸೂಕ್ತ ಕ್ರಮಗಳನ್ನು ತೆಗೆದು ಕೊಂಡಿದ್ದೇವೆ. ಈ ವಿಚಾರದಲ್ಲಿ ಯಾವತರಹ ಲೋಪವೂ ಇಲ್ಲದಂತೆ, ನಾವು ಜಾಗ್ರತೆ ವಹಿಸಿದ್ದೇವೆ. ಇಂದಿನ ಪರಿಸ್ಥಿತಿ ಏನಾಗಿದೆಯೆಂದರೆ, ಉಗ್ರವಾದಿಗಳು ಓಡಿ ಹೋಗುತ್ತಿದ್ದಾರೆ. ಅವರಲ್ಲಿ ಅನೇಕ ಮಂದಿ ಸೆರೆ ಹಿಡಿಯಲ್ಪಟ್ಟಿದ್ದಾರೆ ಅಥವಾ ಸತ್ತಿದ್ದಾರೆ. ಈ ಕೆಲವು ವಾರಗಳು ಹಿಂದೆ ಅನೇಕ ಉಗ್ರವಾದಿಗಳನ್ನು ಬಂಧಿಸಿದ್ದೇವೆ. ಈ ಕಾರ್ಯವನ್ನು ಇನ್ನೂ ಹೆಚ್ಚಿನ ಶ್ರದ್ಧೆಯಿಂದ ಮುಂದು ವರಿಸುತ್ತೇವೆ, ಮುಂಬರುವ ಕೆಲವು ತಿಂಗಳುಗಳಲ್ಲಿ ಈ ಭಯೋತ್ಪಾದನೆಯನ್ನು ನಿಭಾಯಿಸುತ್ತೇವೆಂಬ ಮತ್ತು ಸಂಪೂರ್ಣವಾಗಿ ಉಗ್ರವಾದಿಗಳನ್ನು ನಿರ್ಮೂಲ ಮಾಡುತ್ತೇವೆಂಬ ಭರವಸೆ ನನಗಿದೆ. ಇದು ಆದಷ್ಟು ಬೇಗ ಆಗಲೇಬೇಕು. ಏಕೆಂದರೆ ನಾವು ಇದನ್ನು ಬಹಳ ಕಾಲ ಮುಂದುವರಿಯಲು ಬಿಡುವುದಿಲ್ಲ. ಈಗ ಏನು ನಡೆಯುತ್ತಿದೆಯೆಂದರೆ, ಈ ಕಾರ್ಯದಲ್ಲಿ ಸ್ವಲ್ಪ ನಾವು ಸಫಲರಾದರೆ ಇದಕ್ಕೆ ತಕ್ಕಂತೆ, ಅವರಲ್ಲಿ ಆಶಾಭಂಗವಾಗಿ, ಅವರು ತಮ್ಮ ಆತ್ಮವಿಶ್ವಾಸವನ್ನು ಬೆಳೆಸಿ ಕೊಳ್ಳಲು ಅತ್ಯುಗ್ರ ಕಾರ್ಯಗಳನ್ನು ಕೈಗೊಳ್ಳುವರು. ಉದಾಹರಣೆಗಾಗಿ, ಕಳೆದ ವರ್ಷ ಸಂತ ಲೋಂಗೋವಾಲರ ಹತ್ಯೆಯನ್ನು ನಾವು ನೋಡಿದವು. ಈ ವರ್ಷ ಅವರು ಜನರಲ್ ವೈದ್ಯರವರನ್ನು ಕೊಂದರು. ಈ ಎರಡು ಘಟನೆಗಳೂ ನಮ್ಮನ್ನು

ತೀವ್ರ ದುಃಖಕ್ಕೆ ಈಡುಮಾಡಿನೆ. ಉಗ್ರವಾದಿಗಳು ಬಂಧನಕ್ಕೊಳಗಾದಾಗ, ಸ್ಥಳಾಂತರಿಸಲ್ಪಟ್ಟಾಗ, ನಿರ್ಮೂಲಗೊಳಿಸಲ್ಪಟ್ಟಾಗ ಮತ್ತು ಜನಗಳು ಅವರ ಎದುರು ಬಿದ್ದಾಗ, ಈ ತರಹ ಕೊಲೆಗಳನ್ನು ಅವಲಂಬಿಸುತ್ತಾರೆ.

ಉಗ್ರವಾದಿಗಳನ್ನು ನಿಭಾಯಿಸುವುದು

ಭಯೋತ್ಪಾದಕರ ಮೇಲಿನ ಒತ್ತಡವು ಇನ್ನೂ ಹೆಚ್ಚಾಗುತ್ತಿರುವಾಗ, ಜನಗಳ ನಂಬಿಕೆಯನ್ನು ಅಸ್ಥಿರಗೊಳಿಸಲು ಮತ್ತು ಜನಗಳೇ ಪ್ರತೀಕಾರವನ್ನು ತೆಗೆದು ಕೊಳ್ಳಲು ಪ್ರಚೋದಿಸುವಂತೆ ಮಾಡಲು ಇನ್ನೂ ಕೆಲವು ಕೊಲೆಗಳನ್ನು ಅವರು ಮಾಡಬಹುದು. ಆದರೆ ನಾವು ಅಂತಹ ಪ್ರಚೋದನೆಗಳಿಗೆ ಎಡೆಗೊಡದೆ ಶಾಂತ ರಾಗಿರುವೆವು. ಯಾವ ನಿರ್ದೋಷಿಯಾದ ವ್ಯಕ್ತಿಗೂ ಏನೂ ಅಪಾಯ ಸಂಭವಿಸ ದಂತೆ ನಾವು ನೋಡಿಕೊಳ್ಳುವೆವು. ಅವರು ಒಡ್ಡಿದ ಬಲೆಯಲ್ಲಿ ನಾವು ಬೀಳುವು ದಿಲ್ಲ. ಇದನ್ನು ಭಾರತದ ಪ್ರಜೆಗಳೇ ತೀರ್ಮಾನಿಸಬೇಕು. ಅವರು ಉಗ್ರವಾದಿ ಗಳ ಸಂಚಿನಲ್ಲಿ ಬಲಿ ಬೀಳುವುದಿಲ್ಲವೆಂಬ ನಿರ್ಣಯಕ್ಕೆ ಬರುತ್ತಾರೆಂದು ನನಗೆ ಖಂಡಿತ ನಂಬಿಕೆ ಇದೆ. ನಮ್ಮದೇ ಆದ ಯುಕ್ತಿಯಿಂದ ನಾವು ಅವರನ್ನು ಮುಗಿಸುವೆವು. ಭಯೋತ್ಪಾದಕರನ್ನು ನಿರ್ಮೂಲ ಮಾಡಲು ಬೇಕಾಗಿರುವ ಎಲ್ಲ ಸೂಕ್ತ ಕಾರ್ಯ ಕ್ರಮಗಳನ್ನು ನಾವು ಕೈಗೊಳ್ಳುತ್ತೇವೆ. ಶಕ್ತಿಯನ್ನು ಉಪಯೋಗಿಸಲು, ಪೋಲೀಸ್ ಕ್ರಮಗಳನ್ನು ಕೈಗೊಳ್ಳಲು ರಾಜಕೀಯ ನಿರ್ಧಾರ ಮತ್ತು ಶ್ರದ್ಧೆಗಳಲ್ಲಿ ಕೊರತೆಯಿಲ್ಲ ದಂತೆ ನಾವು ನೋಡಿಕೊಳ್ಳುತ್ತೇವೆ. ಅನೇಕ ತಪ್ಪು ತಿಳಿವಳಿಕೆಗಳನ್ನು ಹೋಗ ಲಾಡಿಸಬೇಕು. ಇದಕ್ಕಾಗಿ ನೈತಿಕ ಧೈರ್ಯವು ಬಹಳ ಬೇಕಾಗಿದೆ. ಧರ್ಮದ ಹೆಸರಿನಲ್ಲಿ ಹಿಂಸೆ, ಬೆಂಕಿ ಹಚ್ಚುವುದು ವಿಚಿತ್ರವಾಗಿದೆ. ಸಂತರ, ಗುರುಗಳ ಹೆಸರಿ ನಲ್ಲಿ ಭಯೋತ್ಪಾದನೆ ಮತ್ತು ಹಿಂಸೆಗಳು ನಡೆಯುತ್ತಿರುವುದು ಸೋಜಿಗವೆನಿಸಿದೆ. ಭಯೋತ್ಪಾದನೆಯ ಸಮಸ್ಯೆಯನ್ನು ಎದುರಿಸಲು, ಸರ್ಕಾರವು ತನ್ನ ಎಲ್ಲಾ ಬಲ ಗಳನ್ನು ಕ್ರೋಢೀಕರಿಸಿದೆ. ಇದೇ ಸಮಯದಲ್ಲಿ, ಭಾರತದ ಪ್ರಜೆಗಳು, ಮನಃ ಪೂರ್ವಕ ಬೆಂಬಲವನ್ನು ನೀಡುತ್ತಾ ಈ ಕೇಡಿನ ವಿರುದ್ಧ ದೃಢವಾಗಿ ನಿಲ್ಲಬೇಕು. ನಾವು ಉಗ್ರವಾದಿಗಳೊಡನೆ ಹೋರಾಡಬೇಕಾದರೆ, ೭೫ ಕೋಟಿ ಭಾರತೀಯರೆಲ್ಲ ಒಂದಾಗಿ ನಿಂತರೆ ಮಾತ್ರ ಸಾಧ್ಯ. ಅಹಿಂಸಾ ಮಾರ್ಗದಲ್ಲಿ ನಾವು ಭಯೋತ್ಪಾದಕ ರನ್ನು ಐಕಮತ್ಯದಿಂದ ಎದುರಿಸಬಲ್ಲೆವು. ಅಹಿಂಸಾ ಸಿದ್ಧಾಂತವು ಕೇವಲ ಸಂತರಿ ಗಾಗಿ ಮತ್ತು ಋಷಿಗಳಿಗಾಗಿ ಅಲ್ಲ. ಇದು ಸಾಮಾನ್ಯ ಪ್ರಜೆ ಅವಲಂಬಿಸಬೇಕಾದ ಒಂದು ನಿಷ್ಠೆ ಎಂದು ಗಾಂಧೀಜಿ ಹೇಳಿದ್ದಾರೆ. ಅಹಿಂಸೆಯು ಪ್ರಜೆಗಳನ್ನು ಶಕ್ತಿ ವಂತರನ್ನಾಗಿ ಮಾಡುತ್ತದೆ. ಹಿಂಸೆ ಮತ್ತು ಅಸಹನೆಯು ನಮ್ಮ ಬಲಹೀನತೆ ಯನ್ನು ಬಹಿರಂಗಪಡಿಸುತ್ತವೆಂದು ಗಾಂಧೀಜಿಯವರು ನಮಗೆ ಬೋಧಿಸಿದ್ದಾರೆ. ಹಿಂಸೆ ಮತ್ತು ಅಸಹನೆಯನ್ನು ಹಿಂಸೆ ಮತ್ತು ಅಸಹನೆಯಿಂದ ಎದುರಿಸಬಾರದೆಂದು

ಗಾಂಧೀಜಿಯವರು ಹೇಳಿದ್ದಾರೆ. ಅವರು ಶಾಂತಿ ಮತ್ತು ಅಹಿಂಸೆಯ ಮಾರ್ಗ ವನ್ನು ತೋರಿಸಿದ್ದಾರೆ. ನಾವು ಭಯೋತ್ಪಾದನೆಯನ್ನು ಶಾಂತಿ ಮತ್ತು ಅಹಿಂಸೆಯ ಮೂಲಕವೇ ಎದುರಿಸಬಲ್ಲೆವು. ಕೋಮುವಾರು ಸೌಹಾರ್ದತೆ ಮತ್ತು ಸಹನೆಯ ಮಾರ್ಗದಲ್ಲೇ ನಾವು ಭಯೋತ್ಪಾದನೆಯನ್ನು ಜಯಿಸುತ್ತೇವೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರೀತಿಯಲ್ಲೇ ಭಯೋತ್ಪಾದನೆಯ ವಿರುದ್ಧ ಸಹ, ಕುಲ, ಮತ, ಭಾಷಾಭೇದಭಾವವಿಲ್ಲದೆ ಪ್ರಜೆಗಳೆಲ್ಲ ಒಂದಾಗಿ ಹೋರಾಡುವಂತಾಗ ಬೇಕು.

ನಾನು ಇಲ್ಲಿ ನಿಂತಿರುವಾಗ, ನನ್ನ ಕಣ್ಣೆದುರಿಗೆ ದೇವಸ್ಥಾನಗಳು, ಮಸೀದಿ ಗಳು, ಗುರುದ್ವಾರಗಳು, ಚರ್ಚ್‌ಗಳು ಕಾಣಿಸುತ್ತಿವೆ. ಇದೇ ನಿಜವಾದ ಭಾರತದ ಸಂಪತ್ತು. ಇದರಲ್ಲೇ ನಮ್ಮ ಶಕ್ತಿಯು ಅಡಗಿರುವುದು. ನಾನು ಇಲ್ಲಿ ನಿಂತಿರುವಂತೆಯೇ ನನ್ನ ಮನಸ್ಸು ಗಾಂಧೀಜಿ ಮತ್ತು ಪಂಡಿತಜೀಯವರ ಕಡೆ ಹೋಗಿದೆ. ನಾನು ಮೌಲಾನಾ ಅಜಾದ್, ಸರದಾರ್ ಪಟೇಲ್, ರಾಜೇಂದ್ರ ಬಾಬು, ರಾಜಾಜಿ, ಸುಭಾಷ್ ಚಂದ್ರಬೋಸ್, ಶಾಸ್ತ್ರೀಜೀ ಮತ್ತು ಇಂದಿರಾಜೀ ಯವರನ್ನೂ ಸಹ ಸ್ಮರಿಸುತ್ತಿದ್ದೇನೆ. ಇಂದಿರಾಜೀ ಇದೇ ಸ್ಥಳದಲ್ಲೇ ಕೆಂಪುಕೋಟೆ ಯಿಂದ ೧೬ ಸಲ ಸಂಬೋಧಿಸಿದ್ದಾರೆ. ಅವರು ಭಾರತದ ಬಡವರಿಗಾಗಿ, ಹಿಂದುಳಿ ದವರಿಗಾಗಿ ತಮ್ಮ ಜೀವಮಾನಪರ್ಯಂತ ಸೆಣಸಿದ್ದರು. ಅವರು ಭಾರತದ ಏಕತೆಗಾಗಿ ಮತ್ತು ಸಮಗ್ರತೆಗಾಗಿ ಹೋರಾಡಿ ತಮ್ಮ ಪ್ರಾಣವನ್ನೇ ಅದಕ್ಕಾಗಿ ಅರ್ಪಿಸಿದ್ದಾರೆ. ಅವರು ಕೈಗೊಂಡ ಕೆಲಸವನ್ನು ಈಡೇರಿಸುವ ಹೊಣೆಗಾರಿಕೆಯು ನಮ್ಮ ಮೇಲಿದೆ. ಅವರ ಕನಸುಗಳನ್ನು ಎಲ್ಲ ವಿಧದಲ್ಲೂ ನನಸಾಗಿಸುತ್ತೇವೆ. ನಮ್ಮ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಜಾತ್ಯತೀತತೆ, ವ್ಯಕ್ತಿಸ್ವಾತಂತ್ರ್ಯ, ಏಕತೆ, ಸಮಗ್ರತೆ ಮತ್ತು ದೇಶದ ಗೌರವವನ್ನು ಕಾಪಾಡುತ್ತೇವೆಂದು ನಾವು ಈ ದಿನ ಪ್ರತಿಜ್ಞೆ ಮಾಡೋಣ. ★

(೧೯೮೮ ಆಗಸ್ಟ್ ೧೫ : ಕೆಂಪು ಕೋಟೆ, ದಿಲ್ಲಿ)

ಸಿಹಿ ಉತ್ತರ

ಮಿರ್ಜಾ ಗಾಲೀಬ್, ಉರ್ದು ಪ್ರಸಿದ್ಧ ಕವಿ. ಆದಾಯಕ್ಕೂ ಮೀರಿ ಖರ್ಚು ಮಾಡುತ್ತಿದ್ದರು. ಆದ್ದರಿಂದ ಯಾವಾಗಲೂ ಸಾಲದಲ್ಲಿ ಮುಳುಗಿರುತ್ತಿ ದ್ದರು. ಒಂದು ದಿನ ಅವರಿಗೆ ಸಾಲ ಕೊಟ್ಟಂಥ ಒಬ್ಬನು ಬಂದು ಕದ ತಟ್ಟಿದ. ಕವಿ ಅವನನ್ನು ಸ್ವಾಗತಿಸಿ ಅವನಿಗೆ ಸಿಹಿತಿಂಡಿ ಕೊಟ್ಟರು. “ನನ್ನ ಸಾಲ ಹಿಂದಿರುಗಿ ಸಲು ನಿಮ್ಮ ಬಳಿ ಹಣ ಇಲ್ಲ. ಆದರೆ ಇಂಥ ದುಬಾರಿ ತಿಂಡಿಗಾಗಿ ನಿಮ್ಮ ಬಳಿ ಹಣ ಇದೆ ಅಲ್ಲವೆ?” ಎಂದು ಆ ಸಾಲ ಕೊಟ್ಟವನು “ಕೋಪದಿಂದ ನುಡಿದ. ದಯಮಾಡಿ ಕೋಪಿಸಿಕೊಳ್ಳ ಬೇಡ. ಈ ತಿಂಡಿಗೂ ನಾನು ಹಣವನ್ನು ಕೊಟ್ಟಿಲ್ಲ!” ಗಾಲಿಬ್ ಉತ್ತರಿಸಿದರು. ★

ರಾಜೀವರಿಗೆ ನ್ಯಾಯ ದೊರೆಯಬೇಕಿತ್ತು

ಲೇಖಕರು : ಎ. ಎನ್. ದಾರ್

"ಯೋಚನೆ ಬೇಡ, ವಿರಮಿಸಿಕೊ" – ಇವು ರಾಜೀವ ಗಾಂಧೀಯವರ ಕೊನೆ ಮಾತುಗಳು. ಈ ಮಾತನ್ನು ಅವರು ಹೇಳಿದ್ದು ಅನುಸೂಯಳಿಗೆ. ಅನುಸೂಯ ಓರ್ವ ಮಹಿಳಾ ಪೋಲಿಸ್. ರಾಜೀವ್‌ಗೆ ಹಾರ ಹಾಕಲು ಬಂದಿದ್ದ ಕೊಲೆಗಾರ್ತಿಯೆಂದು ಸಂಶಯ ಪಡಬಹುದಾಗಿದ್ದವಳನ್ನು ಅನುಸೂಯಾ ಪಕ್ಕಕ್ಕೆ ತಳ್ಳಿದ್ದಳು. ಆ ಇನ್ನೊಬ್ಬ ಹೆಂಗಸು ಹತ್ತಿರ ಬರುವಂತೆ ಅನಕೂಲವಾಗಲೆಂದು ರಾಜೀವ ತನ್ನನ್ನು ತಳ್ಳಿದರು ಎಂದು ಆ ಮಹಿಳಾ ಪೋಲಿಸ್ ಅನಸೂಯಾ ನಂತರ ಹೇಳಿದಳು. "ಆ ಅಪರಿಚಿತ ಮಹಿಳೆ ರಾಜೀವರ ಹತ್ತಿರ ಹೋಗುವುದನ್ನು ತಡೆದೆ. ಆದರೆ ರಾಜೀವ ನನ್ನನ್ನು ಪಕ್ಕಕ್ಕೆ ಸರಿಸಿದರು. ಕೆಲವು ಹೆಜ್ಜೆ ಹಿಂದಕ್ಕೆ ನಾನು ಜೋಲಿಹೊಡೆದೆ. ಅಷ್ಟು ಹೊತ್ತಿಗೆ ಆ ಕೊಲೆಗಾರ್ತಿ ರಾಜೀವಗೆ ಹಾರ ಹಾಕಿದ್ದಳು, ಅವರ ಪಾದ ಮುಟ್ಟಿದ್ದಳು, ನಂತರ ಕ್ಷಣಾರ್ಧದಲ್ಲಿ ಸ್ಫೋಟವಾಯಿತು."

ಈ ದುರ್ಘಟನೆ ನಡೆಯುವ ಅರೆಕ್ಷಣ ಹಿಂದೆ ತನ್ನ ಕರ್ತವ್ಯ ನೆರವೇರಿಸುತ್ತಿರುವ ಒಬ್ಬ ಪೋಲಿಸ್ ಪೇದೆ ಅನಸೂಯಳ ಮನಸ್ಸನ್ನು ನೋಯಿಸಿದ್ದಕ್ಕಾಗಿ ರಾಜೀವ ಅವಳಿಗೆ ಸಮಾಧಾನ ಹೇಳುತ್ತಿದ್ದರು. ಅವಳ ಭುಜತಟ್ಟುತ್ತಾ ಮುಗುಳ್ನಗೆ ಬೀರುತ್ತ ಹೀಗೆ ಅನ್ನುವ ಬಯಕೆ ರಾಜೀವರಿಗೆ ಇತ್ತೊ ಏನೊ, "ನೀನು ನಿನ್ನ ಕರ್ತವ್ಯ ಮಾಡುತ್ತಿದ್ದೀಯೆ. ಆದರೆ ಈಗ ಅದನ್ನು ಗಂಭೀರವಾಗಿ ಪರಿಗಣಿಸಿದರು. ನಿನ್ನ ಕೆಲಸದ ನಿರ್ವಹಣೆಯಲ್ಲಿ ನಾನು ಮಧ್ಯ ಪ್ರವೇಶಿಸಿದುದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ."

ಇದು ಎಂಥ ಒತ್ತಡದ ಮಧ್ಯೆಯೂ ನಯ – ವಿನಯದ ಸಾಕಾರ ಮೂರ್ತಿಯಾಗಿದ್ದ ರಾಜೀವ ಗಾಂಧೀಯವರ ಒಂದು ವ್ಯಕ್ತಿ ಚಿತ್ರ. ನಿಜ, ನಮ್ಮಂತೆ ಅನೇಕರಂತೆ ಕೆಲವೊಂದು ಸಲ ರಾಜೀವ್‌ಗೆ ತಮ್ಮ ಕೋಪವನ್ನು ತಡೆಹಿಡಿಯಲು ಆಗುತ್ತಿರಲಿಲ್ಲ. ಆದರೆ ಅಂಥ ಘಟನೆಗಳು ಅತಿ ವಿರಳ. ತಮ್ಮ ನಿರೀಕ್ಷೆ ಅಥವಾ ಅಪೇಕ್ಷೆಯಂತೆ ಕೆಲಸಗಳು ತೀವ್ರವಾಗಿ ಆಗದೇ ಇರುವಂಥ ಸಂದರ್ಭದಲ್ಲಿ ಅವರು ಸಹನೆ ಕಳೆದುಕೊಳ್ಳುತ್ತಿದ್ದರಷ್ಟೆ.

ವೆಂಕಟೇಶ್ವರನ್‌ಗೆ ಸಂಬಂಧಿಸಿದ ಘಟನೆ ತೀವ್ರ ಟೀಕೆಗೆ ಒಳಗಾಗಿತು, ಕೆಲವು ವರ್ಷಗಳ ಹಿಂದೆ ಹೈದರಾಬಾದಿನಲ್ಲಿ ಅಂಜಯ್ಯನವರು ರಾಜೀವ ಗಾಂಧೀಯವರ

ಸ್ವಾಗತಕ್ಕಾಗಿ ಅದ್ದೂರಿಯಾಗಿ ಸಿದ್ಧತೆ ಮಾಡಿದ್ದು ರಾಜೀವರಿಗೆ ಒಪ್ಪಿಗೆಯಾಗಲಿಲ್ಲ. ಅದಕ್ಕಾಗಿ ರಾಜೀವ ಬಹಳಷ್ಟು ಕೋಪಿಸಿಕೊಂಡರು. ರಾಜೀವ್ ಯಾವಾಗಲೂ ತರಾತುರಿಯ ಮನುಷ್ಯ. ಆದರೆ ಬಿರುಸು ನುಡಿಯನ್ನು ಅರಿಯ. ಸಾಮಾನ್ಯವಾಗಿ ರಾಜಕಾರಣಿಗಳು ತಮ್ಮ ಯಶಸ್ಸಿನ ಭರಾಟೆಯಲ್ಲಿದ್ದಾಗ ಹರಿತವಾದ ನಾಲಗೆಯನ್ನು ಹೊಂದಿರುತ್ತಾರೆ. ಅಂಥ ನಾಲಗೆ ರಾಜೀವರಿಗೆ ಇರಲಿಲ್ಲ. ನಟನೆ, ವಿಡಂಬನೆ ಅವರಿಗೆ ಅಪರಿಚಿತ.

ನಮ್ಮನ್ನೆಲ್ಲ ಈಗ ಕಾಡುತ್ತಿರುವ ಪ್ರಶ್ನೆ: ರಾಜಕೀಯ ಇಂಥವರಿಗೆ ಅಲ್ಲವೆ? ಒಂದುವೇಳೆ ಇಂಥ ಮನುಷ್ಯ ಬಂದರೆ, ಆಗ ಏನು ಆಗುತ್ತದೆ? ಈಗ ಕಳೆದ ಕೆಲವು ದಿನಗಳಿಂದ ಈ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಂಡಿದ್ದೇವೆ. ಈ ಪ್ರಶ್ನೆಗೆ ತ್ವರಿತವಾಗಿ ಉತ್ತರ ಹುಡುಕಬೇಕು. ಏಕೆಂದರೆ ರಾಜಕಾರಣದಲ್ಲಿ ಒಂದು ಕೈ ನೋಡಬೇಕೆಂದು ಬಯಸಿ ಅನೇಕ ಪುರುಷರು, ಹೆಂಗಸರು ಆ ಕ್ಷೇತ್ರಕ್ಕೆ ಇಳಿಯು ತ್ತಿದ್ದಾರೆ. ತಮ್ಮ ಗುರಿ ಸಾಧಿಸುವುದಕ್ಕಾಗಿ ಅವರು ಸಭ್ಯತೆಯ ಮುಸುಕಿನಲ್ಲಿ ಮೋಸದ ಬುದ್ಧಿಯನ್ನು ಪಡೆದಿರಬೇಕೆ? ಸಭ್ಯ ನಡುವಳಿಕೆ ಒಂದು ದೌರ್ಬಲ್ಯವೆ? ರಾಜಕೀಯ ಕೊನೆಗೂ ಒಂದು ಕೊಚ್ಚೆಯೇ?

ಯಾವುದೇ ಮಾರ್ಗದಿಂದ ಒಳ್ಳೆಯದಾಗಬಹುದು, ಕೆಟ್ಟದ್ದಾಗಬಹುದು–ತನ್ನ ಎದು ರಾಳಿಯನ್ನು ನಿರ್ನಾಮ ಮಾಡಲು ಹಿಂಜರಿಯದಂಥ ವ್ಯಕ್ತಿಗಳಿಗೆ ಮಾತ್ರ ರಾಜಕಾರಣ ಸೀಮಿತವಾಗುವುದು ತಪ್ಪಬೇಕೆಂದು ನಾವು ಬಯಸುವುದಾದರೆ ಮೇಲ್ಕಾಣಿಸಿದಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲೇ ಬೇಕು. ಈ ಪ್ರಶ್ನೆಗಳು ರಾಜೀವ ಗಾಂಧೀ ಯವರ ತಲೆ ತಿಂದಿರಬೇಕು. ಅವರೊಂದು ದೊಡ್ಡ ಪಕ್ಷದ ನೇತಾರರಾಗಿದ್ದರು. ಆ ಪಕ್ಷದಲ್ಲಿ ಎಲ್ಲ ಪ್ರಕಾರದ ಜನರಿದ್ದಾರೆ. ಸ್ವಾರ್ಥಿಗಳು, ನಿಸ್ವಾರ್ಥಿಗಳು; ಅದರ ಮೇಲೆಯೇ ಜೀವನ ಮಾಡಿಕೊಳ್ಳುತ್ತ ತಮ್ಮ ಭವಿಷ್ಯವನ್ನು ರೂಪಿಸಿಕೊಂಡವರು; ಎಲ್ಲವನ್ನೂ ತ್ಯಾಗಮಾಡಿ ಪ್ರತಿಯಾಗಿ ಏನನ್ನೂ ಪಡೆಯದವರು. ಇಂಥವರನ್ನೆಲ್ಲ ಒಂದೇ ಛತ್ರಛಾಯೆಯಲ್ಲಿ ಮುನ್ನಡೆಸುತ್ತ, ಯೋಗ್ಯರಲ್ಲದವರನ್ನು ನಿಧಾನವಾಗಿ ಉಚ್ಚಾಟನೆ ಮಾಡುತ್ತ ಹೋಗಬೇಕಾಗಿತ್ತು ರಾಜೀವ. ಹೀಗೆ ಮಾಡಲು ಅವರು ಬಯಸಿದ್ದರೆಂಬುದಕ್ಕೆ ಮುಂಬೈಯಲ್ಲಿ ಅವರು ಅಧಿಕಾರ ದಳ್ಳಾಳಿಗಳನ್ನು (Power Brokers ಗಳನ್ನು) ಉಲ್ಲೇಖಿಸಿ ಮಾಡಿದ ಭಾಷಣ ಸೂಚಿಸುತ್ತದೆ.

ಆದರೆ ಆ ರೀತಿ ಮಾಡಲು ಸುತ್ತಲಿನ ಜನ ಅವರನ್ನು ಬಿಡಲಿಲ್ಲ. ಪಕ್ಷವನ್ನೂ ಹಾಗೂ ದೇಶವನ್ನೂ ಶುಚಿಗೊಳಿಸಲು ಹೊರಟಾಗ ಅವರ ದಾರಿಯಲ್ಲಿ ಅಡ್ಡಿ ಆತಂಕಗಳನ್ನು ಒಡ್ಡಲಾಯಿತು. ಅವರಿಗೆ ಆ ಕೆಲಸದಲ್ಲಿ ಎಷ್ಟು ಯಶಸ್ಸು ದೊರೆಯು ತ್ತಿತ್ತೋ ಅದು ಬೇರೆ ವಿಷಯ. ಆದರೆ ಆ ಕೆಲಸವನ್ನು ಪ್ರಾರಂಭಿಸುವುದಕ್ಕೇ

ಜನ ಅವರಿಗೆ ಬಿಡಲಿಲ್ಲವಲ್ಲ! ರಾಜಕೀಯವಾಗಿ ಅವರನ್ನು ನಾಶಮಾಡಲು ಎಲ್ಲ ಪ್ರಯತ್ನವನ್ನೂ ಮಾಡಲಾಯಿತು.

ಈ ಪ್ರಯತ್ನ ಅಧಿಕಾರದ ದಳ್ಳಾಳಿಗಳಿಂದ ನಡೆಯಲಿಲ್ಲ, ಅವರ ಸಹೋದ್ಯೋಗಿಗಳಲ್ಲಿಯೇ ಕೆಲವರು ಅವರ ವಿರುದ್ಧ ನಿಂತರು. ಈಗ ಭಾರತದಲ್ಲಿ ನಡೆಯುತ್ತಿರುವಂತೆ ಒಬ್ಬರ ಕತ್ತನ್ನು ಇನ್ನೊಬ್ಬರು ಕುಯ್ಯುವಂಥ ರಾಜಕೀಯ ವ್ಯವಹಾರದಲ್ಲಿ ಇದು ಸಮ್ಮತವೇ ಎಂದು ನಮ್ಮಲ್ಲಿಯ ಅನೇಕರು ಭಾವಿಸಬಹುದು. ಆದರೆ ಬುದ್ಧ, ಗಾಂಧೀಜಿ ಹುಟ್ಟಿದ ದೇಶದಲ್ಲಿ ಇದು ಸರಿಯೆ?

ರಾಜೀವರ ಮೇಲೆ ಎಲ್ಲ ಪ್ರಕಾರದ ಆಪಾದನೆಗಳನ್ನು ಹೊರಿಸಿ ಅವರು ಆ ಆಪಾದನೆಗಳಿಗೆ ಉತ್ತರ ಕೊಡುವುದರಲ್ಲಿಯೇ ಸಮಯ ಕಳೆಯುವಂತೆ ಮಾಡಲಾಯಿತು, ಇದರಿಂದ ಅವರ ಬಗೆಗಿನ ಸಾರ್ವಜನಿಕ ವಿಶ್ವಾಸ ನಷ್ಟವಾಗುತ್ತ ಬಂತು. ಈ ಹೇಯ ಕೃತ್ಯದಲ್ಲಿ ಅವರ ಪಕ್ಷದ ಮತ್ತು ಸಂಪುಟದ ಹಾಗೂ ಪ್ರಚಾರ ಮಾಧ್ಯಮದ ಜನರು ಒಂದುಗೂಡಿದ್ದರು. ಕೆಲವು ಕೃತ್ಯಗಳು ಉದ್ದೇಶ್ಯಪೂರ್ವಕವಾಗಿರಲಿಕ್ಕಿಲ್ಲ. ಹಾಗಾದರೆ ಈ ಪ್ರಕಾರದ ರಾಜಕಾರಣ ಒಂದು ಜೀವನ ವಿಧಾನವೆ? ಇದು ದೊಡ್ಡ ಆತಂಕಕಾರಿ ವಿಷಯ.

ಹೆಚ್‌ಡಿಡಬ್ಲ್ಯೂ (HDW) ಸ್ಕ್ಯಾಂಡಲ್ ಕುರಿತ ರಕ್ಷಣಾ ಇಲಾಖೆಯ ಪತ್ರಿಕಾ ಹೇಳಿಕೆಯನ್ನೇ ತೆಗೆದುಕೊಳ್ಳಿ. ಮೊದಲು ಅದು ಪತ್ರಿಕೆಯಲ್ಲಿ ಪ್ರಕಟಗೊಂಡು ನಂತರ ಪ್ರಧಾನ ಮಂತ್ರಿಯವರ ಬಳಿ ಹೋಯಿತು! ಆಗ ಅವರೇನೂ ಮಾಡುವಂತಿರಲಿಲ್ಲ. ಹೇಗೆ ನಾಜೂಕ ರೀತಿಯಿಂದ ತಕ್ಕ ಬುದ್ಧಿಯನ್ನು ಉಪಯೋಗಿಸಲಾಯಿತೆಂಬುದಕ್ಕೆ ಇದೊಂದು ವಿಶಿಷ್ಟ ಉದಾಹರಣೆ. ಯಾವ ಮುನ್ನೆಚ್ಚರಿಕೆಯನ್ನೂ ಕೊಡದೆ ಅವರ ಮುಖದಲ್ಲಿಯೇ ಭ್ರಷ್ಟಾಚಾರದ ಹೆಸರಿನ ಬಾಂಬ್ ಸಿಡಿಸುವ ವಿಚಾರ ಅದಾಗಿತ್ತು. ಅದರಂತೆಯೇ ಬೋಫರ್ಸ್ ಚಳುವಳಿ ಕೂಡ. ವಿ. ಪಿ. ಸಿಂಗ್ ಕಾಂಗ್ರೆಸ್ ತ್ಯಜಿಸಿ ಅಲಹಬಾದ್ ಕ್ಷೇತ್ರದಿಂದ ಉಪಚುನಾವಣೆಯಲ್ಲಿ ಗೆದ್ದ ಮೇಲೆ ಸಿಂಗ್‌ರ ಹಿಂಬಾಲಕರು "ರಾಜೀವ ಗಾಂಧೀ ಕಳ್ಳ" ಎಂಬ ಘೋಷಣೆ ಪ್ರಚುರ ಪಡಿಸಿದರು. ವ್ಹಿ. ಪಿ. ಸಿಂಗ್ ರಾಜೀವ ಗಾಂಧೀಯವರನ್ನು ತಮ್ಮ ಗುರಿಯಾಗಿಟ್ಟುಕೊಂಡಿದ್ದರು. ಆದರೆ ರಾಜೀವ ಅಂಥ ಹೀನ ಘೋಷಣೆಗಳಿಗೆ ಮಾರುತ್ತರ ಕೊಡಲು ಸಾಧ್ಯವಾಗಲಿಲ್ಲ. ಏಕೆಂದರೆ ಅವರು ಬೆಳೆದ ವಾತಾವರಣ, ಅವರ ಸಂಸ್ಕಾರ ಭಿನ್ನವಾಗಿತ್ತು. ರಾಜೀವರ ಕುಟುಂಬವನ್ನು ಸಹ ವಿವಾದದ ಸುಳಿಗೆ ಎಳೆದರು. ಅವರೇನಾದರೂ ಚುನಾವಣೆಯಲ್ಲಿ ಸೋತರೆ ರೋಮ್‌ಗೆ ಮೊದಲನೇ ವಿಮಾನದಲ್ಲಿ ಹಾರಿಹೋಗುವರೆನ್ನುವಷ್ಟರ ಮಟ್ಟಿಗೆ ಹಗುರಾಗಿ ಮಾತನಾಡಿದರು.

೨೩ ನೇ ಪುಟ ನೋಡಿ

ಭಾರತೀಯ ರಾಜಕೀಯ ನಕ್ಷೆ: ನಕ್ಷತ್ರಗಳಿಲ್ಲದ ಆಗಸ

ಲೇಖಕರು : ಎಲ್. ಸಿ. ಜೈನ್

ನಿರಂತರವಾಗಿ ಉದಯಿಸುತ್ತಿದ್ದ ನಕ್ಷತ್ರಗಳಿಗೆ ಭಾರತೀಯ ರಾಜಕೀಯ ಆಗಸದಲ್ಲಿ ಸ್ಥಳವೇ ಇಲ್ಲವೇನೋ ಎಂಬ ಕಾಲ ಒಂದಿತ್ತು. ಇದೇನು ಕಟ್ಟುಕಥೆಯಲ್ಲ. ಕೇವಲ ೬೦ ವರ್ಷಗಳ ಹಿಂದೆ, ೧೯೩೧ ಮಾರ್ಚ್ ೨೩ ರಂದು – ಭಗತಸಿಂಗ್, ರಾಜಗುರು ಮತ್ತು ಸುಖದೇವ ನಗುನಗುತ್ತ ನೇಣುಗಂಬವನ್ನೇರಿದರು. ಇದು ಲೋಕ ಪ್ರಸಿದ್ಧ ಸಂಗತಿಯೇ. ಆದರೆ ಅವರು ಗಲ್ಲಿಗೇರುವ ಕೆಲವು ಹಿಂದಿನ ದಿನಗಳಲ್ಲಿ ಕಾರಾಗೃಹದಲ್ಲಿ ತೆರೆಯ ಮರೆಯಲ್ಲೇನು ನಡೆಯಿತು ಅಥವಾ ನೇಣುಹಗ್ಗದ ಉರಳನ್ನು ಸೇವಂತಿಗೆ ಹಾರವೆಂದು ಧರಿಸಲು ಅವರಿಗೆ ತಂದುಕೊಟ್ಟ ಪ್ರೇರಣೆ ಯಾವುದೆಂಬುದು ಅಷ್ಟು ಪ್ರಸಿದ್ಧವಾಗಿಲ್ಲ.

ಲಾಹೋರ್ ಪಿತೂರಿ ಕೇಸ್ ಪ್ರತಿವಾದಿ ಸಮಿತಿಯ ಸದಸ್ಯರು ಈ ಮೂವರನ್ನೂ ನೇಣುಗಂಬದಿಂದ ಉಳಿಸಲು ಕಾತುರರಾಗಿದ್ದರು. ವಕೀಲ ಪ್ರಾಣನಾಥರವರು ಭಗತಸಿಂಗನ ಮೇಲೆ ಕೊಂಚ ಪ್ರಭಾವ ಹೊಂದಿದ್ದರು. ೧೯೩೧ ಮಾರ್ಚ್ ೧೯ ರಂದು ಅಂದರೆ ಫಾಸಿ ಶಿಕ್ಷೆಗೆ ಗೊತ್ತಾದ ದಿನದ ಕೆಲವು ದಿನಗಳ ಹಿಂದೆ ಪ್ರಾಣನಾಥ ಈ ಮೂವರನ್ನು ಲಾಕ್–ಅಪ್‌ನಲ್ಲಿ ಭೇಟಿ ಮಾಡಿದರು ಮತ್ತು ಒಂದು ದಯಾ ಅರ್ಜಿಯನ್ನು ಸಲ್ಲಿಸುವಂತೆ ಸಲಹೆಕೊಟ್ಟರು. ಅದಕ್ಕೆ ಈ ಮೂವರೂ ಒಪ್ಪುವುದಾದರೆ ಅವರ ಗೌರವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ತಾವು ಒಂದು ಅರ್ಜಿಯ ಕರಡನ್ನು ತಯಾರಿಸುವುದಾಗಿ ಪ್ರಾಣನಾಥ ಹೇಳಿದರು.

ಸುಖದೇವ ಮತ್ತು ರಾಜಗುರು ಕೆಂಡವಾದರು, ಆದರೆ, ಭಗತಸಿಂಗ್ ಬೇರೆಯಾಗಿಯೇ ಪ್ರತಿಕ್ರಿಯಿಸಿದರು. ಅವರು ಪ್ರೇಮನಾಥಗೆ ಹೇಳಿದರು, "ಆಗಲಿ, ನೀವು ದಯಾ ಅರ್ಜಿಯನ್ನು ತಯಾರಿಸಿ ತನ್ನಿ." ಅನೇಕ ಪ್ರತಿಷ್ಠಿತ ವಕೀಲರ ಸಹಾಯದಿಂದ ಮನವೊಲಿಸುವ ಅರ್ಜಿಯನ್ನು ಪ್ರಾಣನಾಥ ತಯಾರಿಸಿ ಮಾರನೇಯ ದಿನವೇ ತೆಗೆದುಕೊಂಡು ಬಂದರು. ಆ ಅರ್ಜಿ ಎಂಥ ಕಠಿಣ ಹೃದಯಿಗಳ ಹೃದಯವನ್ನೂ ಕರಗಿಸುವಂಥಾದ್ದಾಗಿತ್ತು. "ನೀವು ತಡವಾಗಿ ಬಂದಿದ್ದೀರಿ," ಭಗತಸಿಂಗ್ ಪ್ರಾಣನಾಥರನ್ನು ನೋಡುತ್ತಿದ್ದಂತೆಯೇ ಉದ್ಗಾರ ತೆಗೆದರು, "ನಾವು ಈಗಗಾಲೇ

ದಯಾ ಅರ್ಜಿಯನ್ನು ಸಲ್ಲಿಸಿದ್ದೇವೆ" ಎಂದು ಮಾತು ಮುಗಿಸಿ ಪ್ರಾಣನಾಥರಿಗೆ ಆ ಅರ್ಜಿಯ ನಕಲನ್ನು ತೋರಿಸಿದರು. ಅಧಿಕಾರಿಗಳಿಗೆ ಸಲ್ಲಿಸಲಾದ ಆ ಅರ್ಜಿಯಲ್ಲಿ ಹೀಗೆ ಬರೆಯಲಾಗಿತ್ತು:–

"ಫಾಸಿಬೇಡ, ನಮ್ಮನ್ನು ಗುಂಡಿಟ್ಟು ಸಾಯಿಸಿ."

ಎರಡು ದಿನಗಳ ತರುವಾಯ ಪಕ್ಕದ ಕಾರಾಗೃಹ ಕೋಣೆಯಲ್ಲಿದ್ದ ಕ್ರಾಂತಿ ಕಾರಿಗಳು ಭಗತಸಿಂಗಗೆ ಈ ಪ್ರಕಾರ ಒಕ್ಕಣೆಯುಳ್ಳ ಒಂದು ಚೀಟಿ ಕಳುಹಿಸಿದರು:–
"ಸರ್ದಾರರೇ, ನೀವು ಒಂದು ವೇಳೆ ಫಾಸಿಯಿಂದ ಉಳಿದುಕೊಳ್ಳಲು ಬಯಸುವುದಾದರೆ ತಿಳಿಸಿರಿ, ಈ ಕೊನೆ ಘಳಿಗೆಯಲ್ಲೂ ಬಹುಶಃ ಏನಾದರೂ ಸಾಧ್ಯವಾಗಬಹುದು."

ಭಗತ್ ಉತ್ತರಿಸಿದರು:

"ನನಗೂ ಬದುಕಬೇಕೆಂಬ ಸಹಜ ಬಯಕೆಯಿದೆ. ಅದನ್ನು ಮರೆಮಾಚಲು ಇಷ್ಟಪಡುವುದಿಲ್ಲ. ನಾನು ಸ್ವತಂತ್ರನಾಗಿರಬಲ್ಲೆ ಎಂಬ ಕರಾರಿನ ಮೇಲೆ ಮಾತ್ರ ಬದುಕಲಿಚ್ಛಿಸುತ್ತೇನೆ.

"ಇಂದು ನನ್ನ ಹೆಸರು ಭಾರತದ ಕ್ರಾಂತಿಯ ಸಂಕೇತವಾಗಿದೆ. "ಕ್ರಾಂತಿ ಪ್ರಸಂಗ ಪಕ್ಷ" ದ ಆದರ್ಶಗಳು ಮತ್ತು ಬಲಿದಾನಗಳು ನನ್ನನ್ನು ಆಗಸೆತ್ತರಕ್ಕೆ ಒಯ್ದಿವೆ. ಇನ್ನು ನಾನು ಬದುಕಿ ಉಳಿದರೆ ಅದಕ್ಕಿಂತ ಎತ್ತರ ಅವು ನನ್ನನ್ನು ಒಯ್ಯಲಾರವು.

ಇಂದು ನನ್ನ ದೌರ್ಬಲ್ಯಗಳು ಸಾರ್ವಜನಿಕರಿಂದ ಮರೆಯಾಗಿವೆ. ನಾನೇನಾದರೂ ನೇಣುಗಂಬದಿಂದ ತಪ್ಪಿಸಿಕೊಂಡರೆ ಆ ದೌರ್ಬಲ್ಯಗಳು ಬಹಿರಂಗಗೊಳ್ಳುವವು. ಆಗ ಕ್ರಾಂತಿಯು ಉರಿ ಆರಿ ಹೋಗದಿದ್ದರೂ ಅದರ ಪ್ರಖರತೆ ಕಡಿಮೆಯಾಗುವುದು. ಬದಲಿಗೆ, ನಾನು ನೇಣುಗಂಬ ಧೈರ್ಯದಿಂದ ಅಪ್ಪಿಕೊಂಡರೆ ಲಕ್ಷಾಂತರ ಮಾತೆಯರುರು ತಮ್ಮ ಮಕ್ಕಳನ್ನು ಭಗತಸಿಂಗರಂತೆ ಆಗಲು ಪ್ರೇರಣೆ ಕೊಡಬಹುದು. ಇಂಥ ತ್ಯಾಗಿಗಳ ದೊಡ್ಡ ಪ್ರವಾಹವೇ ಮಾತೃಭೂಮಿಯ ಬಿಡುಗಡೆಗಾಗಿ ಹರಿದು ಬಂದಾಗ ಇಂಗ್ಲೀಷ್ ಸಾಮ್ರಾಜ್ಯ ಬಗ್ಗಲೇ ಬೇಕಾಗುತ್ತದೆ.

ಇಂದು ನಾನು ನನ್ನ ಹೆಸರಿನ ಬಗ್ಗೆ ಅಭಿಮಾನ ಹೊಂದಿದ್ದೇನೆ. ನನ್ನ ಅಂತಿಮ ಪರೀಕ್ಷೆಯ ಗಳಿಗೆ ಬಂದಿದೆ. ಅದು ಇನ್ನು ಬೇಗನೆ ಬರಲೆಂದು ದೇವರಲ್ಲಿ ಮೊರೆಯಿಡುತ್ತೇನೆ."

ಭಾರತಮಾತೆಯ ಮಟ್ಟಿಗೆ ಭಾರತೀಯ ಆಗಸವನ್ನು ಪ್ರಕಾಶಿಸಿದಂಥ ತಾರೆಗಳಲ್ಲಿ ಭಗತಸಿಂಗ್ ಮೊದಲನೇಯವರಾಗಲೀ ಕೊನೆಯವರಾಗಲೀ ಅಲ್ಲ. ೧೮೬೦ ರಲ್ಲಿ ನಾನಾಸಾಹೇಬರ್ ಕಮಾಂಡರಾಗಿದ್ದ ಜ್ವಾಲಾ ಪ್ರಸಾದರು ಗಲ್ಲಿಗೇರಿಸ

ಲ್ಪಟ್ಟರು. ಲೇಹಾಸಿಂಗ್ ಕಕಾ ವಿರೋಧ ಆಂದೋಲನದಲ್ಲಿ ಭಾಗವಹಿಸಿದ್ದಕ್ಕಾಗಿ ೧.೭೧ ರಲ್ಲಿ ಬಾಬಾ ರಾಮ ಸಿಂಗ್ ಕೂಡ ಗಲ್ಲಿಗೇರಿಸಲ್ಪಟ್ಟರು.

೧೮೯೯ ರಲ್ಲಿ ಯರವಡಾ ಜೇಲು ಮಹಾದೇವ ರಾಣಾ ಮತ್ತು ಅವರ ಇಬ್ಬರು ಸಹೋದರರಾದ ವಾಸುದೇವ ಮತ್ತು ಬಾಲಕೃಷ್ಣ ಚಾಪೇಕರ್ ಅವರ ನೇಣು ಹಾಕು ವಿಕೆಯಿಂದ ಅಮರವಾಯಿತು. ೧೯೦೮ ರಲ್ಲಿ ಖುದಿರಾಮ್ ಬೋಸ್ ಅವರ ನೇಣು ಗಂಬ ಏರುವಿಕೆಯಿಂದ ಇಪ್ಪತ್ತನೇ ಶತಮಾನ ಪ್ರಾರಂಭವಾಯಿತು. ಖುದೀರಾಮ ನಂತರ ನೇಣುಗಂಬಕ್ಕೆ ಏರಿದವರು:-

ಕನೈಲಾಲಾ ದತ್ತ, ಸತ್ಯೇಂದ್ರನಾಥ ಬಸು, ಚಾರುಚಂದ್ರ ಬೋಸ್, ವಿರೇಂದ್ರನಾಥ ದತ್ತ ಗುಪ್ತ, ಅನಂತ ಲಕ್ಷ್ಮಣ, ಕೃಷ್ಣಗೋಪಾಲ ಕರ್ವೆ, ವಿನಾಯಕ ನಾರಾಯಣ ದೇಶಪಾಂಡೆ ಮತ್ತು ಮೋಹನಲಾಲ್ ಧಿಂಗ್ರಾ. ನಂತರ ೧೯೧೪ರಲ್ಲಿ ನೇಣುಗಂಬ ಏರಿದವರು ಮುರ್ಖುಪ್‌ಖಾನ್, ಗಜ್ಜನ್‌ಖಾನ್ ಮತ್ತು ಆವಲತ್ ಖಾನ್. ೧೯೧೫ರಲ್ಲಿ ಮೇವಾಸಿಂಗ್, ಖುಶಾಲ್‌ಖಾನ್, ಮೊಹಮ್ಮದ ಮತ್ತು ಸತ್ತಾರ್‌ಖಾನ್ ಅಫಿದಿ. ಸಿಂಗಪುರ ಸೈನ್ಯ ವಿದ್ರೋಹ ಘಟನೆ ಎಂದು ಕರೆಯಲ್ಪಟ್ಟಂಥ ಘಟನೆಯಲ್ಲಿ ೪೩ ಜನ ದೇಶಾಭಿಮಾನಿಗಳು ಒಂದು ದಿವಸ ಬೆಳಿಗ್ಗೆ ಒಂದು ಬಯಲಲ್ಲಿ ಸಾಲಾಗಿ ನಿಲ್ಲಿಸಲ್ಪಟ್ಟು ಗುಂಡಿನಿಂದ ಕೊಲ್ಲಲ್ಪಟ್ಟರೆಂಬುದನ್ನು ಯಾರಾದರೂ ನೆನಪಿಟ್ಟಿದ್ದಾರೆಯೆ? ಮರೆತು ಹೋದ ಈ ತಾರೆಗಳಲ್ಲಿದ್ದವರು: ಅಬ್ದುಲ್ ಗನಿಖಾನ್, ಅಹಮ್ಮದ ಖಾನ, ಇನಾಯತ್ ಖಾನ್, ಇಬ್ರಾಹೀಂ, ಇಮಿಯಾಜ್, ಉಮರಾವ್ ಆಲಿ, ಗಫಾರ್ ಆಲಿ, ಚಿಸ್ತೊಖಾನ್, ಜಮೀಲ್, ತಂಡೆ, ತಾಜ್ ಮೊಹಮ್ಮದ್ ಖಾನ್, ನಾಥುಖಾನ್, ನವಾಬ್‌ಖಾನ್, ನಿಯಾಜ್ ಮೊಹಮ್ಮದ, ನಿಶಾನ್‌ಅಲಿಖಾನ್, ನೂರ್ ಮೊಹಮ್ಮದ, ಫಜಲ್ ಆಲಿ, ಫಿರೋಜ್‌ಖಾನ್, ಫಿಯಾಜ್ ಮೊಹಮ್ಮದ, ಬಶರತ್, ಅಕ್ಬರ್ ಆಲಿ, ಭರೇಖಾನ್, ಮುನ್ನಿ ಮುರಾದ್ ಆಲಿ, ಮೊಹಮ್ಮದ ಬಕ್ಷ, ರಫೀ ಮೊಹಮ್ಮದ, ರಸೂಲ್ ಆಲಿ, ರಹಮತ್ ಆಲಿ, ರಹೀಮ ದಾದ್, ಯಕುನು ದಿನ್, ಲಾಲ್‌ಖಾನ್, ಸೈಯದ್ ಮೊಹಮ್ಮದ್ ಸಮಾದ್, ಶಮಶುದ್ದೀನ್ ಸುಲೇಮಾನ್, ಸುಲೆಮಾನ್, ಸುಲೇಮಾನ್ ಮತ್ತೂ ಒಬ್ಬ ಸುಲೇಮಾನ್

ನಾವು ಇನ್ನೂ ೧೯೧೫ ನೇ ಇಸ್ವಿ ಮುಗಿಸಿಲ್ಲ. ಕಾಸಿಮ್ ಮನ್ಸೂರ್, ಕಾಲಾಸಿಂಗ್, ಚನನ್‌ಸಿಂಗ್, ವಿಷ್ಣುಗಣೇಶ, ಪಿಂಗ್ಲೆ, ಮೋತಿಚಂದ ಜೈನ್ ಶಹಾ, ಸಜ್ಜನ್‌ಸಿಂಗ್, ಮಾಸ್ಟರ್ ಅಮೀರ್‌ಚಂದ, ಅವಧಿ ಬಿಹಾರಿ, ಭಾಯಿ ಬಾಲಮುಕುಂದ ಬಸಂತಕುಮಾರ್ ವಿಶ್ವಾಸ, ಜೀವನ ಸಿಂಗ್, ಕಾಶೀಮ್‌ರಾಮ್, ಜಗತಸಿಂಗ್, ಧ್ಯಾನಸಿಂಗ್, ಬಕ್ಷಿ ಸಿಂಗ್, ಲಾಲ್ ಸಿಂಗ್, ರಹಮತ್ ಆಲಿ, ಇಶಾರ್‌ಸಿಂಗ್, ಫೂಲ್

ಸಿಂಗ್, ಬೇಬಿ ಸಿಂಗ್, ಪಜಾರ್ ಸಿಂಗ್, ಅಬ್ದುಲ್ಲಾ, ಇಂದರ ಸಿಂಗ್ ಗುಜರ ಸಿಂಗ್, ಜೀತಾ ಸಿಂಗ್, ತಾರಾ ಸಿಂಗ್, ಬಢಾ ಸಿಂಗ್, ಬುಟಾ ಸಿಂಗ್ ಬುದ್ಧ ಸಿಂಗ್, ಭಗತ್ ಸಿಂಗ್ ಮೋತಿಸಿಂಗ್, ಲಕ್ಷ್ಮಣಸಿಂಗ್, ಆತ್ಮಾಸಿಂಗ್, ಕಾಲಾಸಿಂಗ್, ಚಮನಸಿಂಗ್ ಬಂಟಾ ಸಿಂಗ್, ಹರ್ನಾಮ್ ಸಿಂಗ್, ಕರ್ತಾರ ಸಿಂಗ್, ಜಗತ್ ಸಿಂಗ್, ಸುರೇನ್ ಸಿಂಗ್, ಇನ್ಮೊರ್ವ ಸುರೇನ್‌ಸಿಂಗ್, ಹರ್ನಾಮ ಸಿಂಗ್, ಮನೋರಂಜನಸೇನ್ ಗುಪ್ತ ಮತ್ತು ನೌರೇನ್‌ಚಂದ್ರದಾಸ.

೧೯೧೬ ರಲ್ಲಿ ಸೋಹನ ಲಾಲ ಪಾಠಕ, ಭಗತ ಸಿಂಗ್, ಸುರಂಜನ್ ಸಿಂಗ್, ತಾಲೇಶ್ವರಸಿಂಗ್, ಇಂದ್ರಸಿಂಗ್, ಪ್ರೇಮಸಿಂಗ್, ಬೋರೆಸಿಂಗ್, ಈಶ್ವರಸಿಂಗ್, ರಂಗಸಿಂಗ್, ರುಥಾಸಿಂಗ್, ಉತ್ತಮಸಿಂಗ್, ನಾರಾಯಣಸಿಂಗ್, ಹರ್ನಾಮಸಿಂಗ್, ಪಾಲಸಿಂಗ್, ಬಸವಾಸಿಂಗ್. ನಿರಂಜನಸಿಂಗ್, ಮತ್ತು ಚಾಲಿಯಾರಾಮ.

ಮುಂದಿನ ಹತ್ತು ವರ್ಷಗಳಲ್ಲಿ ಡಾ॥ ಮಥೂರಾ ಸಿಂಗ್, ಆತ್ಮಾರಾಮ್, ಬಾಬುರಾಮ್, ಬಲ್ವಂತ ಸಿಂಗ್, ನಾಪಾ, ಹಾಫೀಜ್ ಅಬ್ದುಲ್ಲಾಹ, ರುಥಾ ಸಿಂಗ್, ಜವಂದ ಸಿಂಗ್, ಸುಶೀಲ ಲಾಹಿರಿ ಉ॥ ಕೆಮಿಸ್ಟ್ ಅಜೀಜ್ ಅಲ್ಲಾಹ್, ಗಾಮನ್ ಘುಲಾಮ್ ಹುಸೇನ್, ಚರಣದಾಸ್, ದೌಲತ ಖಾನ್, ಥಾನಿರಾಮ್, ನಾಥರಾಮ್, ಫಕೀರ್, ಬಲಾಂದು, ವೀರಸಿಂಗ್, ಬಿಶನ್, ಬುದ್ಧಾ, ಮಹಾನಿ, ಮೊಹಮ್ಮದ ಶಫಿ, ರಾಮ ಚಂದ್ರ, ಲಾಭು, ಸೋಹನ, ಹುಸೈನಾ, ಹುಸೇನ್ ರಾಮ ಅವತಾರ್, ಸಾಲಿಕ್, ಹರೇಂದ್ರ ಕುಮಾರ್ ಘೋಷ, ಶಹಾ ಗೋಪಿ ಮೋಹನ, ಕರಮ ಸಿಂಗ್, ಕಿಶನ್ ಸಿಂಗ್, ದುಲೀಪ್ ಸಿಂಗ್, ಧರಮ್ ಸಿಂಗ್, ನಂದ ಸಿಂಗ್, ಸಾಂತಾ ಸಿಂಗ್, ಅನಂತ ಹರಿ, ಪ್ರಮೋದ ರಂಜನ ಚೌಧರಿ, ಗುಲಾ ಅಕ್ಬರ್, ರಾಜೇಂದ್ರನಾಥ ಲಾಹಿರಿ, ಅಶ್ಫಕುಲ್ಲಾ ಖಾನ್, ರಾಮಪ್ರಸಾದ್ ಬಿಸ್ಮಿಲ್, ಠಾಕೂರ್ ರೋಶನ್ ಸಿಂಗ್, ರೊಮೇಶ್ ಚಂದ್ರ ಚಟರ್ಜಿ, ರಾಮಕಿಶನ್ ಬಿಸ್ವಾಸ್, ಹರೇಂದ್ರ ಚಕ್ರವರ್ತಿ, ಕೃಷ್ಣಕುಮಾರ್ ಚೌಧರಿ, ನಿರ್ಮಲ್ ಜೀವನ ಘೋಷ್, ರಾಮಕ್ರಿಸ್ತೊ ರೈ, ಬ್ರಿಜ್ ಕಿಶೋರ್ ಚಕ್ರವರ್ತಿ, ಪ್ರೇಮ ಕಿಶೋರ್ ಚಕ್ರವರ್ತಿ, ಹರಿಕೇಷ್ ಭಟ್ಟಾಚಾರ್ಯ, ಸರೋಜಕುಮಾರ್ ಬೋಸ್, ಸತ್ಯಬ್ರತ ಚಕ್ರವರ್ತಿ, ಕಿರಣ ಚಂದ್ರ ದೇವ್, ಅಬ್ದುಲ್ ಕಾದಿರ್ ಚೌಧರಿ, ಸತ್ಯಾನಂದ, ಜಸ್ವಂತ್ ಸಿಂಗ್, ದೇವ ನಾರಾಯಣ

ನಿಮ್ಮ ಸಹನೆಗೆ ಬಹುಮಾನ ಕೊಡುವ ಮೊದಲು ಇನ್ನು ಕೆಲವು ಹೆಸರುಗಳನ್ನು ಜ್ಞಾಪಿಸಲು ನನಗೆ ಅವಕಾಶಕೊಡಿ. ಈ ಹೆಸರುಗಳೆಲ್ಲ ಭಗತಸಿಂಗನ್ ತರುವಾಯ ಬರುವಂಥವು. ಮೂವತ್ತರ ದಶಕಗಳಲ್ಲಿ ಸೂರ್ಯಸೇನ್, ತಾರಕೇಶ್ವರ ದಸ್ತಿದಾರ್, ದೇವಿದಯಾಲ್, ಸಾಧು ಸಿಂಗ್, ಭಾನ್ ಸಿಂಗ್, ಲಾಲ್ ಸಿಂಗ್,

ಕಿಶನ್‌ಲಾಲ್ ಶರ್ಮಾ, ಕುರ್ಬಾನ್ ಹುಸೈನ್, ಜಗ್ಗನ್‌ನಾಥ ಸಿಂಧು ,ಮಲ್ಲಪ್ಪಧನ ಶೆಟ್ಟಿ, ಹಬೀಬ್ ನೂರ್. ದಿನೇಶ್‌ಚಂದ್ರ ಗುಪ್ತಾ, ವಿನಯ ಕಿಸನ್ ಬೋಸ್, ಹರಿಕಿಸನ್ ತಲ್ವಾರ್, ಅಬ್ದುಲ್ ಘನಿ, ದೇವ ನಾರಾಯಣ ತಿವಾರಿ, ಯಶ್ವಂತ್ ಸಿಂಗ್, ರಾಮ ದೇನಿ ಸಿಂಗ್, ಮನಷಾ ಸಿಂಗ್, ಮನೋರಂಜನ್ ಭಟ್ಟಾಚಾರ್ಯ, ಅಬುಲ್ ರಶೀದ, ಕಾಲಿಪಾದ್ ಮುಖರ್ಜಿ, ಪ್ರದ್ಯೋತ ಕುಮಾರ್ ಭಟ್ಟಾಚಾರ್ಯ ಪ್ರಿತಮ್‌ಖಾನ್, ದಿನೇಶ್ ಮಜುಮದಾರ್, ಭಾಟಿಲಾಲ್ ಮಲಿಶ್, ಭವಾನಿ ಪ್ರಸಾದ ಭಟ್ಟಾಚಾರ್ಯ, ರೋಹಿಣಿ ಬರುವಾ, ಕರ್ತಾರ್ ಸಿಂಗ್ ಕೀರ್ತಿ.

ನಲ್ವತ್ತರ ದಶಕಗಳ ಪ್ರಾರಂಭ ಕೇಂದ್ರ ಭಾರತೀಯ ಅಶ್ವ, ಪಾಲ್‌ನ್‌ಗೆ ಸೇರಿದ ಕೆಲವು ಜನರ್ ನೇಣು ಹಾಕಲ್ಪಡುವುದರ ಮೂಲಕ ಆಯಿತು. ಅವರು: ಸವಾರ್ ಅಜಯದ್ ಸಿಂಗ್, ಲೆ॥ ದಫಾದರ ಗುರುಚರಣ ಸಿಂಗ್, ಮೀಸಲು ಪಡೆಯ ಸಂಧು ಸಿಂಗ್, ಸವಾರ್ ಭೀಷಣ ಸಿಂಗ್, ನಂತರ ಶುಕ್ರ ಗ್ರಹ ಆಗಸವನ್ನು ಸೇರಿತು. ೧೯೪೦ ರ ಜೂಲೈ ೩೧ ರಂದು ಉಧಾಮ್ ಸಿಂಗ್, ಇಂಗ್ಲೆಂಡಿನಲ್ಲಿ ಗಲ್ಲಿಗೇರಿಸಲ್ಪಟ್ಟ. ಎಂಥ ಅದ್ಭುತ ವ್ಯಕ್ತಿತ್ವ! ಉಧಾಮ ಸಿಂಗ್ ವೃತಿಯಿಂದ ಬಡಗಿ. ೧೯೨೦ ರಲ್ಲಿ ಆದ ಜಾಲಿಯಾನವಾಲ್ ಬಾಗ್ ಹತ್ಯಾಕಾಂಡದ ನಂತರ ಆಗ ಪಂಜಾಬದ ಗರ್ವನರ್ ಆಗಿದ್ದ ಮೆಕೇಲ್ ಓ ಡಾಯರ್‌ನನ್ನು ಶಿಕ್ಷಿಸಬೇಕೆಂದು ಉಧಾಮ ಸಿಂಗ್ ತೀರ್ಮಾನಿಸಿದ್ದ. ಅವನು ಡಾಯರನ್ನು ಇಂಗ್ಲೆಂಡಿಗೂ ಹಿಂಬಾಲಿ ಸಿದ. ಅವಕಾಶಕ್ಕಾಗ್ಗಿ ಅತ್ಯಂತ ಸಹನೆಯಿಂದ ಅಲ್ಲಿ ಕಾಯ್ದು. ೧೯೪೦ ರಲ್ಲಿ ಅವಕಾಶ ದೊರೆಯಿತು. ಓ 'ಡಾಯರನನ್ನು ನೇರ ಗುರಿಯಿಟ್ಟು ಗುಂಡಿಕ್ಕಿದ. ಓ' ಡಾಯರ್ ಸ್ಥಳದಲ್ಲೇ ಕುಸಿದು ಬಿದ್ದ. ಉಧಾಮ ಸಿಂಗ್ ಆ ಸ್ಥಳದಿಂದ ಒಂದಿಂಚೂ ಕದಲಲಿಲ್ಲ. ತನ್ನ ಉದ್ದೇಶ್ಯ ಸಾಧಿತವಾಯಿತೆಂದು ಘೋಷಿಸಿದ ಮತ್ತು ತನ್ನ ದಸ್ತಗಿರಿಯಾಗಲೆಂದು ಹೇಳಿದ. ಉಧಾಮ ಸಿಂಗನ ಬಗ್ಗೆ ಇನ್ನೂ ಹೆಚ್ಚಿನ ವಿವರಗಳ ಬಗ್ಗೆ ಆಮೇಲೆ ಬರೋಣ.

ಈ ಮಧ್ಯ ನಾವು ಲಖನ್ ನಾಯಕ್, ರಾಮಸಿಂಗ್, ವಿಷ್ಣು ಗೋಂದ್, ಪಾಂಡುರಂಗ ಸಾವಲಾಖಿ, ರಘುನಾಥ ಕುಂಬಾರ್, ತುಳಸಿರಾಮ್ ಪಾಚಘಾರೆ ಮಾಳಿ, ಬಾಕ್ರೊಮ್ ಮುಕ್ಕದಮ್ ತೇಲಿ, ವಾಮನ್ ಚಕ್ಕೀವಾಲ್, ಅಂಕಡಿಯಾ ಭೊಯ್, ಕಾಲೆಖಾನ್, ನಾಥು ಆಮ್ಲೆ ಮಾಳಿ, ಮಾಧೊ, ಗುಲಾಬರಾವ್ ವಾಘ, ರಾಜಗೋಪಾಲನ್, ಕಾಶಿರಾಜನ್, ಕುಶಾಲಚಂದ್ರ ಕೋವರ್, ಧರಮಕಾಂತ್ ಡೆಕ್ಕಾ, ಕನಕೇಶ್ವರ್ ಕೋವರ್, ಘನಶ್ಯಾಮ ಸೈಕಿಯಾ, ಜುಬ್ಬಾ ಮಲ್ಲಾಹ್, ಸೂರಜ್‌ಮಣಿ ಸಿಂಗ್, ಹರನಾರಾಯಣ ಅಗ್ರಹಾರಿ, ದೇವ ಸಾಗರ ಸಿಂಗ್, ಟಿ. ಆರ್. ಕುಮನಾರ್ ನಯ್ಯಾರ್, ರಾಮು ಧೀವರ್, ಅಜಯಬ್ ಸಿಂಗ್,

ಝೂಹೂರ್ ಅಹಮ್ಮದ, ಸತ್ಯೇಂದ್ರನಾಥ ಮಜುಮದಾರ್, ನಾಗೇಂದ್ರ ಮಜು ಮನಾರ್ ಅವರನ್ನು ಜ್ಞಾಪಿಸಿಕೊಳ್ಳೋಣ.

ಚೀಮೂರ್ ಬಂಡಾಯ ಎಲ್ಲ ಜಾತಿಯ ಜನರನ್ನು – ಅಕ್ಕಸಾಲಿಗರಿಂದ ಹಿಡಿದು ನಯನಕ್ಷತ್ರಿಯರವರೆಗೆ ಎಲ್ಲರನ್ನು – ಒಳಗೊಂಡಿತ್ತು. ಬಾಬುರಾವ ಗಣಪತ ಸಿಂಪೂ, ಬಾಬುರಾವ ಭೋಪೆ; ಬಲಿರಾಮ ಕವಾಡು, ಧೋಬಿ, ದಾದಾ ಬೇಲ್ದಾರ್, ದೋಮಾ ದರ್ಜಿ, ದಾದಾ ನೆ, ಗಣಪತಿ ಧೋಬಿ, ಗೋಪಾಲ ಸೋನಾರ್, ಮಹದೇವ ಸೋನಾರ್, ಪತ್ರು ಮಲಾರ್, ರಾಮಭಾವು ಕುಣ್ಬೆ, ಸಖಾರಾಮ ಸಾಲೆವಾರ್. ಇನ್ನೇನು ಅವರನ್ನು ನೇಣುಗಂಬಕ್ಕೆ ಕರೆದುಕೊಂಡು ಹೋಗಲಾಗುತ್ತದೆ ಎಂದೆನ್ನುವ ವೇಳೆಗೆ ಅವರಿಗೆ ಕರಿನೀರಿನ ಶಿಕ್ಷೆ ಘೋಷಿ ಸಲ್ಪಟ್ಟಿತು. ಗೌರವದ ಈ ಪಟ್ಟಿ ಎಲ್ಲ ಜನಾಂಗ, ಜಾತಿ ಮತ್ತು ಧರ್ಮದ ಜನರನ್ನು ಒಳಗೊಂಡಿತು. ಹೇಮುಲ ಕಲಾನಿ, ಮೇದಧಿತ್ ಅಪ್ಪು, ಪೋಡಾವರ್, ಕನ್ನಂಬು ನಾಯರ್, ಚೋರಾಕಂದನ್, ಅಭೋಕರಾ, ಟಿಕಾರಾಮ್ ಗೋಪೆ, ಮಹಾವೀರ್ ದುತಾಥ, ಮೋತಿ ಬರ್ೈ ಮೇಹರ್ ದಿನ್, ಮೊಹಮ್ಮದ ಅಬ್ದುಲ್ ಕ್ವಾದಿರ್, ಎಸ್. ಸಿ. ಬರ್ದ್ದಾನ್, ಫೌಜ್ ಸಿಂಗ್, ಎಸ್. ಎ. ಆನಂದ್, ಲಾನ್ಸ್ ನಾಯಕ್, ಶಫಾರ್ ಹುಸ್ಸೈನ್, ರಾಮ ಸಿಂಗ್, ಶಾಯೋ ಪ್ರಸಾದ್ ಸಿಂಗ್, ರಾಜ ನಾರಾಯಣ ಮಿಶ್ರಾ, ಎನ್. ಕೆ. ಕನಾರಾನ್, ರತ್ನಂ, ರಾಮಸ್ವಾಮಿ ಸೇಠು ಮತ್ತು ಮಾರ್ಚ್ ೧೧೪೩ರಲ್ಲಿ ಮಹೇಂದ್ರ ಚೌಧರಿ.

ನಿಮ್ಮ ಸಹನೆಗೆ ಪರೀಕ್ಷೆ ಒಡ್ಡುತ್ತಾ ಈ ಹೆಸರುಗಳನ್ನು ನಾನು ಉಚ್ಚರಿಸಿದ್ದು ಭಾರತೀಯ ರಾಜಕೀಯ ಆಗಸದ ಹೊನಲನ್ನು ಆನಂದಿಸುವುದಕ್ಕಾಗಿ. ನಾನು ಹೇಳಿರುವ ಈ ಹೆಸರುಗಳಿಗಾಗಿ ಹಾಗೂ ಮುಂದೆ ಹೇಳಲಿರುವ ದೃಷ್ಟಾಂತಗಳಿಗಾಗಿ ನಾನು ನನ್ನ ತಂದೆ ಫೂಲ್‌ಚಂದ ಜೈನರಿಗೆ ಆಭಾರಿಯಾಗಿದ್ದೇನೆ, ನನ್ನ ತಂದೆ ಸ್ವಾತಂತ್ರ್ಯದ ನಂತರ ಪ್ರಚಲಿತ ರಾಜಕಾರಣವನ್ನು ಬಿಟ್ಟು ಹಸ್ತ ಪತ್ರಿಕೆಗಳ ಸಂಗ್ರ ಹಾಲಯ ಮತ್ತು ಕಾರಾಗೃಹ ದಾಖಲೆಗಳನ್ನು ಸಂಶೋಧಿಸುವ, ಏಕಾಂಗಿಯಾಗಿ ೩೫ ವರ್ಷಗಳ ಕಾಲ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿದ ನಿಜವಾದ ಹೆಸರುಗಳನ್ನು/ ವ್ಯಕ್ತಿಗಳನ್ನು ಗುರುತಿಸುವ ಕಾರ್ಯದಲ್ಲಿ ತೊಡಗಿದ್ದರು.

ನಾನು ಈಗ ಜ್ಞಾಪಿಸಿಕೊಂಡ ಹೆಸರುಗಳು ಮತ್ತು ಜ್ಞಾಪಿಸಿಕೊಳ್ಳದೇ ಇರುವ ಸಾವಿರಾರು ಹೆಸರುಗಳು ಎಲ್ಲವೂ ಭಾರತದ ಹಿತಕ್ಕಾಗಿಯೇ ತಮ್ಮ ಜೀವನ ಮುಡಿ ಪಾಗಿದೆಯೆಂಬ ಉತ್ಕಟ ಇಚ್ಛೆ ಆಗಿನ ಯುವಕರಲ್ಲಿತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಇವರಲ್ಲಿ ಎಂ. ಎನ್. ರಾಯ್‌ರೂ ಒಬ್ಬರು.

ಇನ್ನು ಅನೇಕರು ತಮ್ಮ ಶತ್ರುಗಳೆಂದು ಯಾರನ್ನು ಭಾವಿಸಿದ್ದರೋ ಅವರಿಗೆ ಯಾವ ಅಪಾಯುವನ್ನೂ ಮಾಡದೆ ತಾವೇ ಸ್ವತಃ ಏಕಪಕ್ಷೀಯುವಾಗಿ ಬಲಿದಾನ ಮಾಡಿಕೊಂಡರು. ಯತೀಂದ್ರನಾಥದಾಸ ೧೯೨೯ ಸೆಪ್ಟೆಂಬರ್‌ನಲ್ಲಿ ೬೩ ದಿನಗಳ ವರೆಗೆ ಉಪವಾಸ ಮಾಡಿ ತಮ್ಮ ಪ್ರಾಣವನ್ನು ಆಹುತಿಕೊಟ್ಟರು. ಪುನಃ, ಆ ರೀತಿ ಮಾಡಿದ ವ್ಯಕ್ತಿ ಅವರೇ ಮೊದಲಿಗರಾಗಲೀ, ಕೊನೆಯುವರಾಗಲೀ ಅಲ್ಲ. ಅವರಿಗಿಂತ ಮುನ್ನ ಫಡಕೆ ವಾಸುದೇವ ೧೮೮೩ ರಲ್ಲಿ ಉಪವಾಸದ ನಂತರ ಸಾವನ್ನಪ್ಪಿದರು. ೧೯೧೭ ರಲ್ಲಿ ರಾಮು ರಖಾ ಅಂಡಮಾನ್ ಜೇಲಿನಲ್ಲಿ ೬೨ ದಿನಗಳ ಉಪವಾಸದ ನಂತರ ಸತ್ತರು. ಬಲವಂತವಾಗಿ ಅವರಿಗೆ ತಿನಿಸಲು ಜೈಲಾಧಿಕಾರಿಗಳು ಮಾಡಿದ ಎಲ್ಲ ಪ್ರಯತ್ನಗಳನ್ನು ಅವರು ವಿಫಲಗೊಳಿಸಿದರು. ಅವರು ಜೈಲಿನಲ್ಲಿಯು ಕೈದಿಗಳ ವ್ಯಕ್ತಿಗತ ಸ್ವಾತಂತ್ರ್ಯದ ಹಕ್ಕಿಗಾಗಿ ಹೋರಾಡಿದರು. ಅವರು ಬ್ರಾಹ್ಮಣರಾಗಿದ್ದರು, ಅವರು ಧರಿಸಿದ್ದ ಜನಿವಾರವನ್ನ ಬಲವಂತವಾಗಿ ತೆಗೆದು ಹಾಕಿದರು. ಆ ಘಟನೆಯಲ್ಲಿ ಜನಿವಾರದ ವಿಷಯ ಮುಖ್ಯವಲ್ಲ. ಆದರೆ ಕಾರಾಗೃಹ ಅಧಿಕಾರಿಗಳಿಂದ ಆದ ದಬ್ಬಾಳಿಕೆ ಗಮನಿಸುವಂಥದ್ದು. ೧೯೧೮ ರಲ್ಲಿ ಬನಾರಸ್ ಪಿತೂರಿ ಕೇಸನಲ್ಲಿ ಅಪರಾಧಿಯಾಗಿದ್ದ ನಾಗೇಂದ್ರನಾಥ ಆಗ್ರಾ ಜೈಲಿನಲ್ಲಿ ಉಪವಾಸ ಮಾಡಿ ಆತ್ಮಾರ್ಪಣೆ ಮಾಡಿಕೊಂಡರು. ೧೯೨೮ ರಲ್ಲಿ ದಲೀಪಸಿಂಗ್ ಡಡ್ಡಾ ತನ್ನ ಪ್ರಾಣ ಅರ್ಪಿಸಿದ. ೧೯೩೦ ರಲ್ಲಿ ಮುರ್ಶಿಬಾದ ಜೇಲಿನಲ್ಲಿ ಮಾಣಿಕಚಂದ ಗುಪ್ತ ಉ॥ ಮಾಣಿಕಲಾಲ್ ಸೇನ್ ಅರವತ್ತು ದಿನಗಳ ಉಪವಾಸದ ನಂತರ ಅಸುನೀಗಿದರು, ಮಹೇಂದ್ರನಾಥ ಬೆನರ್ಜಿ ಫತೇಗರ್ ಜೈಲಿನಲ್ಲಿ; ಹರೇಂದ್ರನಾಥ ಮುನ್ಸಿ ೧೯೩೪ ರಲ್ಲಿ, ಘುಲಾಮ್ ಸರ್ವಾರ್ ವಿದ್ಯಾರ್ಥಿ ೨೪ ದಿನಗಳ ಉಪವಾಸದ ನಂತರ ಡಿಸೆಂಬರ್ ೧೯೪೧ ರಲ್ಲಿ ಸತ್ತರು. ಪಟಿಯಾಲಾದ ಮಹಾರಾಜನ ಆಡಳಿತದ ವಿರುದ್ಧ ಅನ್ನ ಸತ್ಯಾಗ್ರಹ ಮಾಡಿ ೧೯೩೫ ರಲ್ಲಿ ತಿಕ್ರಿವಾಲ ಪ್ರಾಣಕೊಟ್ಟರು.

ಇದೇ ಸಮಯದಲ್ಲಿ ಯತೀಂದ್ರನಾಥ ದಾಸ ತೀವ್ರಗತಿಯಲ್ಲಿ ಸಾವನ್ನಪ್ಪಲು ಧಾವಿಸುತ್ತಿದ್ದರೆ, ಬ್ರಿಟಿಷ್ ಆಳ್ವಿಕೆಯನ್ನು ಪ್ರತಿಭಟಿಸುವುದಕ್ಕಾಗಿ ರಂಗೂನ ಬಂದೀಖಾನೆಯಲ್ಲಿ ಬೌದ್ಧ ಭಿಕ್ಷು ವಿಜಯ ಫುಂಗಿ ಅನ್ನ ಬಿಟ್ಟು ಕೂತಿದ್ದರು. ಯತೀಂದ್ರನಾಥ ಸತ್ತು ಸರಿಯಾಗಿ ಏಳು ದಿನಗಳ ನಂತರ ೧೬೩ ನೇ ದಿನ ವಿಜಯ ಫುಂಗಿ ಇಹಲೋಕ ತ್ಯಜಿಸಿದರು.

ಈ ವಿವರಣೆ ಮುಖ್ಯವಾಗಿ ಧೈರ್ಯವನ್ನು ಎತ್ತಿತೋರಿಸುತ್ತದೆಯೇ ಹೊರತು ಆ ವ್ಯಕ್ತಿಗಳ ಚಾರಿತ್ರ್ಯವನ್ನು ತಿಳಿಸುವುದಿಲ್ಲ, ಅವರ ಚಾರಿತ್ರ್ಯದ ಒಂದು ತುಣುಕು ನೋಟ ದೂರದ ಅಂಡಮಾನಿನಲ್ಲಿ ನಡೆದ ಒಂದು ಘಟನೆಯಿಂದ ಗೊತ್ತಾಗುತ್ತದೆ. ಮಹಾವೀರ ಸಿಂಗ್ ಲಾಹೋರ್ ಪಿತೂರಿ ಕೇಸಿನಲ್ಲಿ ಸಿಕ್ಕಿಹಾಕಿಕೊಂಡಿದ್ದ

ಸ್ವಾತಂತ್ರ್ಯಯೋಧ. ಈಗ ಅಂಡಮಾನ್ ಕಾರಾಗೃಹದಲ್ಲಿ ಕಾಲನೂಕುತ್ತಿದ್ದ. ಪ್ರತಿದಿನ ಸರತಿಯಂತೆ ಒಬ್ಬೊಬ್ಬ ಕೈದಿ ಮರಣಾಂತ ಉಪವಾಸ ಮಾಡಬೇಕೆಂದು ಮಹಾವೀರ ಸಿಂಗ್ ಸಲಹೆ ಮಾಡಿದ. ಇದಕ್ಕೆ ಎಲ್ಲರ ಒಪ್ಪಿಗೆ ದೊರೆಯಿತು. ಆದರೆ ಯಾರು ಮೊದಲು ಉಪವಾಸ ಪ್ರಾರಂಭಿಸಬೇಕೆಂದು ತೀರ್ಮಾನಿಸುವುದಕ್ಕಾಗಿ ಚೀಟಿ ಎತ್ತಬೇಕೆಂಬ ಸೂಚನೆ ಬಂದಿತು. ಇದು ಮಹಾವೀರರ ಕೋಪಕ್ಕೆ ಕಾರಣವಾಯಿತು. ಉಪವಾಸ ಶ್ರೇಣಿಯ ಸಲಹೆ ತನ್ನಿಂದ ಬಂದಿರುವುದರಿಂದ ತಾನೇ ಮೊದಲು ಈ ಉಪವಾಸವನ್ನು ಪ್ರಾರಂಭಿಸಬೇಕೆಂದು ಮಹಾವೀರ ಗರ್ಜಿಸಿದರು. ಆದರೆ ಬೇರೆಯವರು ಒಪ್ಪಲಿಲ್ಲ. ಆದ್ದರಿಂದ ಚೀಟಿ ಎತ್ತುವುದನ್ನು ಕಾಯದೇ ಮಹಾವೀರ ಸಿಂಗ್ ತಮ್ಮ ಉಪವಾಸವನ್ನು ಪ್ರಾರಂಭಿಸಿಯೇ ಬಿಟ್ಟರು. ಆರನೆಯ ದಿನವೇ ತೀರಿಕೊಂಡರು. ಹದಿನಾರನೇ ದಿವಸ ಮೋಹನಕೃಷ್ಣ ರಾಯ್ ಅಸು ನೀಗಿದರು. ಹದಿನೆಂಟನೇ ದಿನ ಮೋಹಿತ ಮಿತ್ರರ ಮರಣದ ಬಾರಿ ಬಂದಿತು. ಹೀಗೆ ಹದಿನೆಂಟು ದಿನಗಳ ಅವಧಿಯಲ್ಲಿ ಒಬ್ಬರಾದನಂತರ ಒಬ್ಬರಂತೆ ಮೂವರು ಯೋಧರು ಆಗಸದಲ್ಲಿ ಅಸೂಹೆಯಾಸ್ಪದವಾದಂಥ ಸ್ಥಾನವನ್ನು ಪಡೆದರು. ಅವರ ಸ್ಥೈರ್ಯ ಮತ್ತು ಧೈರ್ಯವನ್ನು ಕಲ್ಪಿಸಿಕೊಳ್ಳಿ. ಮಹಾವೀರ ಸಿಂಗರ ಕಾರಾಗೃಹ ಸಹವಾಸಿಯಾಗಿದ್ದ ಜೈದೇವ ಕಪೂರ ತಮ್ಮ ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ : ಹೇಳಿ ಬಲಿದಾನವಿಲ್ಲದೆ ಯಾರು ಸ್ವಾತಂತ್ರ್ಯವೆಂಬ ಉಡುಗರೆ ಪಡೆದಿದ್ದಾರೆ? ಇದಕ್ಕೆ ಮೊದಲು ಯತೀಂದ್ರನಾಥ ದಾಸ್ ಎಂಬುವರು "ನನ್ನ ಮರಣ ದೇಶಕ್ಕೆ ಹೊಸ ಜೀವನ ಕೊಡುವುದು" ಎಂಬುದಾಗಿ ಆಶಿಸಿದ್ದರು. (ಮುಂದುವರಿಯುವುದು)

ರಾಜೀವರಿಗೆ ನ್ಯಾಯ ದೊರೆಯಬೇಕಿತ್ತು ೧೫ ನೇ ಪುಟದಿಂದ

ರಾಜೀವ ಗಾಂಧೀಯವರು ತಮ್ಮ ಪ್ರಧಾನ ಮಂತ್ರಿತ್ವದ ಐದು ವರ್ಷಗಳ ಕೊನೆಯ ಅವಧಿಯನ್ನು ಬಹಳ ಬಿಕ್ಕಟ್ಟಿನಲ್ಲಿಯೇ ಕಳೆದರು. ಆಪಾದನೆ, ಅಪಪ್ರಚಾರ ಮುಂತಾದವುಗಳಿಂದ ಅವರ ಕೈ ಕಾಲುಗಳನ್ನು ಕಟ್ಟಲಾಗಿತ್ತು. ಇಡೀ ತಮ್ಮ ಸಮಯವನ್ನು ಅವುಗಳ ನಿರಾಕರಣೆಯಲ್ಲಿಯೇ ಕಳೆಯಬೇಕಾಯಿತು. ಇಂಥ ಅಪನಂಬಿಕೆಯ ವಾತಾವರಣದಲ್ಲಿ ಅವರು ಏನೇ ಒಳ್ಳೆಯ ಕೆಲಸ ಮಾಡಲು ಉದ್ಯುಕ್ತರಾದರೂ ಅದೆಲ್ಲವೂ ಸುಳ್ಳೆಂದು ಅನಿಸುವಂತೆ ಮಾಡಲಾಯಿತು. ಆದರೆ ಕೇವಲ ಭಾರತವೇ ಅಲ್ಲ ಇಡೀ ಪ್ರಪಂಚ ಅವರ ವಿಯೋಗವನ್ನು ಯಾವ ರೀತಿ ವ್ಯಕ್ತ ಪಡಿಸಿತೆಂಬುದನ್ನು ನೋಡಿದರೆ ರಾಜೀವ ಸ್ವತಃ ಏನನ್ನೂ ಕಳೆದುಕೊಂಡಿಲ್ಲವೆಂಬುದನ್ನು ತೋರಿಸುತ್ತದೆ. ತನ್ನ ಘನತೆ–ಗೌರವಗಳನ್ನು ಹೆಚ್ಚಿಸಿಕೊಂಡು ಅವರು ಈ ಪ್ರಪಂಚದಿಂದ ಹೋದರು. ಅವರು ತಮ್ಮ ಜನತೆಯಿಂದ ಪಡೆದಂಥ ಸಾಧ್ಯವಿಲ್ಲ. ಅಂತಿಮ ನಮನವನ್ನು ಪ್ರಪಂಚದ ಯಾವುದೇ ರಾಜ ಅಥವಾ ಅಧ್ಯಕ್ಷ ಪಡೆಯಲು ಇದಕ್ಕೆ ಕಾರಣ ಪ್ರಪಂಚ ರಾಜೀವ ಗಾಂಧೀಯವರನ್ನು ಓರ್ವ ಮಹಾನ್ ಸಭ್ಯ ಮನುಷ್ಯನೆಂದು ಗುರುತಿಸಿತ್ತು. ಅನುವಾದ : ಸುರೇಂದ್ರ ಕೌಲಗಿ (ಡೆಕ್ಕನ್ ಹೆರಾಲ್ಡ್ ಕೃಪೆ)

ನಮ್ಮ ಪರ್ಯಾವರಣ

ಒಂದು ಗಿಡದಿಂದ ೧೫ ಲಕ್ಷ ರೂ. ಉಳಿತಾಯ

ಡಾ॥ತಾರಕಮೋಹನದಾಸ್, ಕಲಕತ್ತಾ ವಿಶ್ವವಿದ್ಯಾನಿಲಯದಲ್ಲಿ ಕೃಷಿ ವಿಜ್ಞಾನಿ. ಅವರ ಇತ್ತೀಚಿಗಿನ ಹೊಸ ಸಂಶೋಧನೆಯೊಂದು ಅರಣ್ಯಗಳನ್ನು ಕುರಿತು ನಮ್ಮಲ್ಲಿ ಹೊಸ ಚಿಂತನೆಯನ್ನು ಉಂಟುಮಾಡಿದೆ. ಇದುವರೆಗೆ ಅರಣ್ಯವೆಂದರೆ ನಮಗೆ ಸೌದೆ, ಹುಲ್ಲು, ಮರ ಇತ್ಯಾದಿ ಕೊಡುವಂಥ ಸಂಪನ್ಮೂಲವೆಂದೇ ತಿಳಿದಿದ್ದೆವು. ಇದು ಪ್ರಕೃತಿಯ ಕೊಡುಗೆ, ಅದರ ಮೇಲೆ ನಮ್ಮ ಹಕ್ಕು ಇದೆಯೆಂದು ನಾವು ಭಾವಿಸಿದ್ದೆವು, ಆದರೆ ವೃಕ್ಷಗಳ ಮುಖ್ಯ ಉತ್ಪಾದನೆ ಪ್ರಾಣವಾಯು (ಆಕ್ಸಿಜನ್) ಎಂದು ಡಾ॥ ದಾಸ್ ಸಿದ್ಧಮಾಡಿದ್ದಾರೆ. ಐವತ್ತು ವರ್ಷದ ವೃಕ್ಷ, ಯಾವುದರ ಸರಾಸರಿ ತೂಕ ಐವತ್ತು ಟನ್ ಇದೆಯೋ ಅಂಥದ್ದನ್ನು ಇನ್ನು ಐವತ್ತು ವರ್ಷ ಉಳಿಗೊಟ್ಟರೆ ಅದರ ಉತ್ಪಾದನೆ ಈ ರೀತಿ ಇರುವುದುಃ—

ಪ್ರಾಣವಾಯುವಿನ ಉತ್ಪಾದನೆ ೧೦೦೦ ಕಿಲೋ	
ಪ್ರತಿ ವರ್ಷದ ಲೆಕ್ಕದಪ್ರಕಾರ ೫೦ ವರ್ಷಗಳಲ್ಲಿ ಕಿಲೋ ೫೦, ೦೦೦	
ಮತ್ತು ಬೆಲೆ ೫/= ರೂ ಪ್ರತಿ ಕಿಲೋನಂತೆ	೨, ೫೦, ೦೦೦=೦೦
ವಾಯು ಪ್ರದೂಶಣೆಯ ಮೇಲೆ ನಿಯಂತ್ರಣ	೫, ೦೦, ೦೦೦=೦೦
ಭೂಸವೆತ ನಿಲುಗಡೆ, ಭೂಮಿಯ ಫಲವತ್ತೆಯಲ್ಲಿ ವೃಧ್ಧಿ	೨, ೫೦, ೦೦೦=೦೦
ನೀರಿನ ಪುನರ್ ಚಕ್ರೀಕರಣ ಮತ್ತು ತೇವಾಂಶದ ಮೇಲೆ ನಿಯಂತ್ರಣ	೩, ೦೦, ೦೦೦=೦೦
ಪಶು–ಪಕ್ಷಿಗಳ ಆವಾಸ	೨, ೫೦, ೦೦೦=೦೦
ಪ್ರೋಟಿನ್ ಉತ್ಪಾದನೆ (ಪಕ್ಷಿಗಳಿಂದ)	೨೦, ೦೦೦=೦೦
	೧೫, ೬೦, ೦೦೦=೦೦

ಮರ ಕಡಿದರೆ ಹಾಗೂ ಅದರ ಇತರ ಕಚ್ಚಾ ಪದಾರ್ಥಗಳ ರೂಪದಲ್ಲಿ ಮರದ ಒಟ್ಟು ಬೆಲೆಯು ಕೇವಲ ಶೇಕಡ ೦.೩ ರಷ್ಟು ಲಾಭ ಮಾತ್ರ ಸಮಾಜಕ್ಕೆ ದೊರೆಯುತ್ತದೆ ಮತ್ತು ಶೇಕಡ ೬೬,೭ ರಷ್ಟು ಹಾನಿಯಾಗುತ್ತದೆ. ಮರಗಳನ್ನು ಕಡಿಯುವುದು ಸಮಾಜಕ್ಕೆ ದ್ರೋಹ, ಮಾನವತೆಗೆ ಅಪರಾಧ. ★

ಜನಪದ ಸೇವಾ ಟ್ರಸ್ಟ್ ಪ್ರಕಟಣೆಗಳು

ಒಂದು ಹುಲ್ಲಿನ ಕ್ರಾಂತಿ

ಪ್ರಾಕೃತಿಕ ವ್ಯವಸಾಯ–ಒಂದು ಪರಿಚಯ

ಮೂಲ : ಮಸನೋಬು ಫುಕುವೊಕಾ; ಕನ್ನಡಾನುವಾದ : ಸಂತೋಷ್ ಕೌಲಗಿ; ಬೆಲೆ : 15 ರೂ.

ಮನುಕುಲ ವಿನಾಶ : ಬಾಂಬ್ ಬೇಕಿಲ್ಲ ಅಣುಸ್ಥಾವರ ಸಾಕು

ಡಾ॥ಎ. ಎಸ್. ನಾಗರಾಜ್

ಬೆಲೆ : 2–00 ರೂ.

ಮಾರಾಟಕ್ಕೆ

ಸಹಜ ಕೃಷಿ : ಒಂದು ಪರಿಚಯ

ಲೇಖಕರು : ಪೂರ್ಣಚಂದ್ರ ತೇಜಸ್ವಿ

ಬೆಲೆ : ೬/=ರೂ

ಕಾವ್ಯಸುಧಾ : ಎಂ. ಎಸ್. ನರಸಿಂಹಮೂರ್ತಿ

ಬೆಲೆ : 12–00 ರೂ.

ಕಾಂಪೋಸ್ಟ್ ಗೊಬ್ಬರದ ಚಮತ್ಕಾರ

–ಬೆಲೆ5:00 ರೂ.

KRNM 44

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ